ಶ್ರೀಃ

ಶ್ರೀಮತೇ ರಾಮಾನುಜಾಯ ನಮ:

ಆಳ್ವಾರ್ಹಳ್‌ವಾಳಿ ಅರುಳಿಚ್ಚೆಯಲ್‌ವಾಳಿ ತಾಳ್ವಾದುಮಿಲ್ ಕುರವರ್ ತಾಂವಾಳಿ ।
ಏಳ್‌ಪಾರುಂ ಉಯ್ಯ ಅವರ್ಹಳ್ ಉರೈತ್ತವೈಹಳ್ ತಾಂವಾಳಿ ಶೆಯ್ಯುಮರೈತನ್ನುಡನೇ ಶೇರ್‌ನ್ದು ॥
ಮಂಗಳಾಶಾಸನಪರೈ: ಮದಾಚಾರ್ಯಪುರೋಗಮೈ: ।
ಸರ್ವೈಶ್ಚ ಪೂರ್ವೈರಾಚಾರ್ಯೈ: ಸತ್ಕೃತಾಯಾಸ್ತು ಮಂಗಳಮ್॥

ಈ ಕೈಪಿಡಿಯನ್ನು ಮುದ್ರಿಸಲು ಸಹಾಯ ಮಾಡಿದ ದಾನಿಗಳಿಗೆ ನಾನು ಕೃತಜ್ಞನಾಗಿದ್ದೇನೆ. ಅವರುಗಳ ಪಟ್ಟಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಈ ವರ್ಷವೂ ದಾಸನಾದ ನಾನೇ ಡಿ.ಟಿ.ಪಿ. ಮಾಡಲು ಚಿಕ್ಕ ಪ್ರಯತ್ನವನ್ನು ಮಾಡಿರುತ್ತೇನೆ. ಈ ಪ್ರಯತ್ನದಲ್ಲಿ ನನಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಾಯ ಮಾಡಿರುವ ಎಲ್ಲರಿಗೂ ನನ್ನ ಧನ್ಯವಾದಗಳು.ಇದನ್ನು ಮುದ್ರಿಸಿ ಕೊಟ್ಟ ಶ್ರೀ.ಪ್ರಸನ್ನಕುಮಾರ್(ಮೈಸೂರು) ರವರಿಗೂ ನಾನು ಕೃತಜ್ಞನಾಗಿದ್ದೇನೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

**ಕೆಲವು ಮುಖ್ಯವಾದ ವಿಷಯಗಳು ಮತ್ತು ಆಚರಣೆಗಳು**

ಈ ಕೈಪಿಡಿಯಲ್ಲಿ ನೀಡಿರುವ ತಿಥಿ, ನಕ್ಷತ್ರ, ಯೋಗ, ಕರಣ, ಲಗ್ನ ಏಷ್ಯ ಮುಗಿಯುವ ಕಾಲ, ಸಂಕ್ರಮಣಕಾಲ ಮುಂತಾದವುಗಳಲ್ಲಿ ಮೊದಲು ನೀಡಿರುವುದು ಘಳಿಗೆ, ವಿಘಳಿಗೆ ಎಂದು ಮತ್ತು ಆವರಣದೊಳಗೆ ನೀಡಿರುವುದು ಘಂಟೆ ನಿಮಿಷವೆಂದು ತಿಳಿಯುವುದು. ಇವು ಮೈಸೂರು ಮತ್ತು ಸುತ್ತಮುತ್ತಲಿನ ಊರುಗಳಿಗೆ ಅನ್ವಯಿಸುತ್ತದೆ. **ರಾ.ಕಾ.**=ರಾಹುಕಾಲ; **ಯ.ಕಾ.**=ಯಮಗಂಡಕಾಲ; **ಮೇ.ದೇವ.**=ಮೇಲುಕೋಟೆ ದೇವಸ್ಥಾನ;.

**ವಿಷ ಘಳಿಗೆ:= ನಕ್ಷತ್ರ ತ್ಯಾಜ್ಯ ಕಾಲ;** ಇಲ್ಲಿ ನಮೂದಿಸಿರುವ ಕಾಲದಿಂದ 1 ಘಂಟೆ 35 ನಿಮಿಷಗಳ ವರೆಗೆ ನಕ್ಷತ್ರ ತ್ಯಾಜ್ಯ ಕಾಲವೆಂದು ತಿಳಿಯುವುದು. ಆ ಕಾಲದಲ್ಲಿ ಶುಭ ಕೆಲಸಗಳನ್ನು ಮಾಡ ಕೂಡದು.**ಲಗ್ನ ತ್ಯಾಜ್ಯ ಕಾಲ:** ಮೇಷ, ವೃಷಭ, ಕನ್ಯಾ, ಧನುರ್ಲಗ್ನಗಳ ಆದಿ ಭಾಗದಲ್ಲೂ, ಕಟಕ, ವೃಶ್ಚಿಕ, ಮಕರ, ಮೀನ ಲಗ್ನಗಳ ಅಂತ್ಯ ಭಾಗದಲ್ಲೂ ಮಿಥುನ, ಸಿಂಹ, ತುಲಾ, ಕುಂಭ ಲಗ್ನಗಳ ಮಧ್ಯ ಭಾಗದಲ್ಲೂ 12 ನಿಮಿಷಗಳನ್ನು (ಅರ್ಧ ಘಳಿಗೆ) ಶುಭಕಾರ್ಯಗಳಲ್ಲಿ ಬಿಡಬೇಕು.**ಲಗ್ನಗಳ ಅವಧಿ:** ಮೇಷ ಘಂ.1–41ನಿ; ವೃಷಭ ಘಂ1–51; ಮಿಥುನ ಘಂ2–05; ಕಟಕ ಘಂ2–13; ಸಿಂಹ ಘಂ2–08; ಕನ್ಯಾ ಘಂ2–02; ತುಲಾ ಘಂ2–02; ವೃಶ್ಚಿಕ ಘಂ2–08; ಧನುಃ ಘಂ2–13; ಮಕರ ಘಂ2–05; ಕುಂಭ ಘಂ1–51; ಮೀನ ಘಂ1–41ನಿ;

**ಯೋಗ ತ್ಯಾಜ್ಯ ಕಾಲವು: ವಿಷ್ಕಂಭ**ದಲ್ಲಿ ಮೊದಲು 3ಘಳಿಗೆ, **ಅತಿಗಂಡ**ದಲ್ಲಿ ಮೊದಲು 6ಘಳಿಗೆ, **ಶೂಲ**ದಲ್ಲಿ ಮೊದಲು 5ಘಳಿಗೆ, **ಗಂಡ**ದಲ್ಲಿ ಮೊದಲು 6ಘಳಿಗೆ,**ವ್ಯಾಘಾತ**ದಲ್ಲಿ ಮೊದಲು 9ಘಳಿಗೆ,**ಹರ್ಷಣ**ದಲ್ಲಿ ಮೊದಲು 15 ಘಳಿಗೆ,**ವಜ್ರ**ದಲ್ಲಿ ಮೊದಲು 3ಘಳಿಗೆ,**ಪರಿಘ**ದಲ್ಲಿ ಮೊದಲನೆಯ ಅರ್ಧ ಭಾಗವು,**ವ್ಯತೀಪಾತ** ಮತ್ತು **ವೈಧೃತಿ**ಗಳಲ್ಲಿ ಪೂರ್ಣವು ಶುಭ ಕಾರ್ಯಗಳಿಗೆ ತ್ಯಾಜ್ಯವು. ಪಂಚಾಂಗದಲ್ಲಿ ತಿಳಿಸಿರುವ ಸೂರ್ಯೋದಯಾಸ್ತ ಕಾಲಗಳು ಮೈಸೂರು ಮತ್ತು ಸುತ್ತಮುತ್ತಲಿನ ಊರುಗಳಿಗೆ ಅನ್ವಯಿಸುತ್ತದೆ. ಬೆಂಗಳೂರಿಗೆ ನಾಲ್ಕು ನಿಮಿಷ ಮೊದಲು ಸೂರ್ಯೋದಯವು ಮತ್ತು ಸೂರ್ಯಾಸ್ತವು ಎಂದು ತಿಳಿಯುವುದು. 12 ಲಗ್ನಗಳು ಮುಗಿಯುವ ಕಾಲಗಳನ್ನು 15 ದಿನಕ್ಕೆ ಒಮ್ಮೆ ತಿಳಿಸಲಾಗಿದೆ. ಪ್ರತಿ ದಿನದಲ್ಲೂ ಸೂರ್ಯ ಉದಯದ ಲಗ್ನ ನೀಡಿದೆ. ಇದು ಮೈಸೂರು ಮತ್ತು ಸುತ್ತಮುತ್ತ ಇರುವ ಊರುಗಳಿಗೆ ಅನ್ವಯಿಸುತ್ತದೆ. ಬೆಂಗಳೂರಿಗೆ ಲಗ್ನಗಳು ಮುಗಿಯುವ ಕಾಲವನ್ನು 4ನಿಮಿಷ ಹಿಂದಕ್ಕೆ ಮಾಡಿಕೊಳ್ಳಬೇಕು. ಶುಕ್ಲ/ಕೃಷ್ಣ ಪಕ್ಷದಕೊನೆಯಲ್ಲಿ ಗೋಚಾರ(ಸೂ.ಸಿ./ವಾಕ್ಯ ಮತ್ತು ದೃಗ್ಗಣಿತ)& ಕುಂಡಲಿ ಬದಲಾವಣೆಗಳನ್ನು ನೀಡಲಾಗಿದೆ.ರಾಹುಕಾಲ,ಯಮಗಂಡ ಕಾಲಗಳನ್ನು, ಬೆಂಗಳೂರಿಗೆ ಅನ್ವಯಿಸುವಾಗ ನಾಲ್ಕು ನಿಮಿಷಗಳು ಹಿಂದಕ್ಕೆ ಮಾಡಿಕೊಳ್ಳಬೇಕು. ಇಲ್ಲಿ ನೀಡಿರುವಸೂರ್ಯೋದಯ ಕಾಲ ಸೂರ್ಯಬಿಂಬದ ಮೇಲ್ಭಾಗದ ಉದಯವನ್ನೂ ಸೂರ್ಯಾಸ್ತ ಮೇಲ್ಭಾಗದ ಅಸ್ತವನ್ನೂ ಸೂಚಿಸುತ್ತದೆ. **ಅಹಃ** ಪ್ರಮಾಣಕ್ಕೆ ಸೂರ್ಯಬಿಂಬದ ಮಧ್ಯದ ಉದಯವನ್ನೂ ಮಧ್ಯದ ಅಸ್ತವನ್ನೂ ತೆಗೆದುಕೊಳ್ಳಲಾಗಿದೆ . ಸೂರ್ಯಬಿಂಬದ ಮಧ್ಯದ ಉದಯ ಮೇಲ್ಭಾಗದ ಉದಯಕ್ಕಿಂತ ಮೂರು ನಿಮಿಷ ನಂತರವೂ ಮಧ್ಯದ ಅಸ್ತ ಮೇಲ್ಭಾಗದ ಅಸ್ತಕ್ಕಿಂತ ಮೂರು ನಿಮಿಷ ಮೊದಲೂ ಆಗುತ್ತದೆ.

**1.ಹಬ್ಬ ಇತ್ಯಾದಿಗಳ ಆಚರಣೆ:** ಶ್ರೀ ವೈಷ್ಣವರಲ್ಲಿ ಮನೆಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ಆಚರಿಸುವ ಹಬ್ಬಗಳು, ಪುಣ್ಯಕಾಲಗಳು, ವಿಶೇಷ ದಿನಗಳನ್ನು ಆಯಾ ದಿನಗಳಲ್ಲಿ ನೀಡಲಾಗಿದೆ.ಮೇಲುಕೋಟೆ ದೇವಸ್ಥಾನದ ಉತ್ಸವಗಳನ್ನು ವಿಶೇಷವಾಗಿ ನೀಡಲಾಗಿದೆ.

**2.ಹುಟ್ಟಿದಹಬ್ಬ ಅಥವಾ ತಿರುನಕ್ಷತ್ರಗಳ ಆಚರಣೆ:** ಶ್ರೀವೈಷ್ಣವರಲ್ಲಿ ಸಾಮಾನ್ಯವಾಗಿ ಸೌರಮಾನ ಮಾಸವನ್ನು ಅನುಸರಿಸಿ ಹುಟ್ಟಿದ ಹಬ್ಬ/ ತಿರುನಕ್ಷತ್ರಗಳನ್ನು ಆಚರಿಸುತ್ತಾರೆ. ಕೆಲವು ಸೌರಮಾನ(ತಮಿಳು) ಮಾಸಗಳಲ್ಲಿ ಎರಡು ನಕ್ಷತ್ರಗಳು ಬರುವುದುಂಟು. ಆಗ ಮೊದಲನೆಯ ನಕ್ಷತ್ರದ ದಿನ ಆ ಕಾಲಂನಲ್ಲಿ ಏನೂ ಸೂಚಿಸದೇ ತಿಂಗಳ ಕೊನೆಯಲ್ಲಿ ಬರುವ ಎರಡನೆ ನಕ್ಷತ್ರವನ್ನು ಮಾತ್ರ ಸೂಚಿಸಿದೆ. ಅಂದೇ ಹುಟ್ಟಿದ ಹಬ್ಬ/ ತಿರುನಕ್ಷತ್ರಗಳನ್ನು ಆಚರಿಸಬೇಕು. ಸೌರಮಾನ ಮಾಸದ (ತಮಿಳುಮಾಸದ) ಕೊನೆಯದಿನ ಎರಡನೇ ನಕ್ಷತ್ರ ಬಂದಿರುವಾಗ ಅಂದೇ ಸಂಕ್ರಮಣ ಕಾಲವು ಸೂರ್ಯಾಸ್ತದ ನಂತರ ಇದ್ದಲ್ಲಿ ಅಂದೇ ತಿರುನಕ್ಷತ್ರ/ ಹುಟ್ಟಿದಹಬ್ಬ ನಕ್ಷತ್ರವನ್ನು ಸೂಚಿಸಿದೆ. ಇದು ವಾಡಿಕೆಯಲ್ಲಿದೆ. ಆಯಾ ನಕ್ಷತ್ರವು ಸೂರ್ಯೋದಯದಿಂದ 10–00 ಘಳಿಗೆ ಅಥವಾ ಅದಕ್ಕೂ ಅಧಿಕವಾಗಿ ಇದ್ದಾಗ ಮಾತ್ರ ಹುಟ್ಟಿದಹಬ್ಬ/ ತಿರುನಕ್ಷತ್ರದ ಕಾಲಂನಲ್ಲಿ ಸೂಚಿಸಿದೆ. 10–00ಘಳಿಗೆಗಿಂತ ಕಡಿಮೆ ಇದ್ದಲ್ಲಿ ಹಿಂದಿನ ದಿನದಲ್ಲಿ ಆ ನಕ್ಷತ್ರವನ್ನು ಸೂಚಿಸಿದೆ.ಎರಡು ನಕ್ಷತ್ರಗಳ ಹುಟ್ಟಿದ ಹಬ್ಬವು ಒಂದೇ ದಿನ ಬಂದಿರುವಾಗ ಮತು ಎಂದು ಸೂಚಿಸಿದೆ. ಇದು ಮೇಲುಕೋಟೆ ಮತ್ತು ಸುತ್ತಮುತ್ತಲಿನ ಕರ್ನಾಟಕದಲ್ಲಿ ಆಚರಿಸುತ್ತಿರುವ ದೇಶಾಚಾರ. ತಮಿಳುನಾಡಿನಲ್ಲಿ ಈ ಹುಟ್ಟಿದಹಬ್ಬ/ ತಿರುನಕ್ಷತ್ರಗಳನ್ನು ಸೂರ್ಯೋದಯದಿಂದ 10–00 ಘಳಿಗೆ ಬದಲು 12–00ಘಳಿಗೆ ವ್ಯಾಪ್ತಿಯ ಆಧಾರದಲ್ಲಿ ಆಚರಿಸುತ್ತಾರೆ.

ಕೆಲವು ಶ್ರೀವೈಷ್ಣವರಲ್ಲಿ ನಕ್ಷತ್ರಗಳು ಸೂರ್ಯೋದಯದಿಂದ 10–00 ಘಳಿಗೆಗಳು ಇಲ್ಲದೆ ಸ್ವಲ್ಪ ಕಾಲ ಇದ್ದರೂ ಹುಟ್ಟಿದ ಹಬ್ಬ ಆಚರಿಸುವ ಸಂಪ್ರದಾಯವಿದೆ ಎಂದು ತಿಳಿಸಿರುತ್ತಾರೆ. ಆದುದರಿಂದ ಅವರವರ ಮನೆಗಳಲ್ಲಿ ಇರುವ ಸಂಪ್ರದಾಯದಂತೆ ತಿಳಿದು ಅನುಸರಿಸುವುದು ಉತ್ತಮ. ಹಾಗೆ ಆ ಪದ್ಧತಿಗಳು ತಿಳಿಯದೇ ಇದ್ದರೆ ಈ ಕೈಪಿಡಿಯಲ್ಲಿ ತಿಳಿಸಿರುವಂತೆ ಆಚರಿಸುವುದು ಒಳ್ಳೆಯದು. ಮರುದೂರ್ ಶ್ರೀವೈಷ್ಣವರಲ್ಲಿ ಹುಟ್ಟಿದಹಬ್ಬಕ್ಕೂ ಚಾಂದ್ರಮಾನ ಮಾಸವನ್ನು ಅನುಸರಿಸಿ ಆಚರಣೆ ಇದೆಯೆಂದು ತಿಳಿಸಿರುವರು.

**3. ಏಕಾದಶೀ ಆಚರಣೆಯ ವಿಷಯ :** ಶ್ರೀವೈಷ್ಣವರಲ್ಲಿ ಏಕಾದಶೀ ಆಚರಣೆಯನ್ನು ಈ ಕೆಳಕಂಡಂತೆ ನಿರ್ಧರಿಸುತ್ತಿರುವುದು ಸಂಪ್ರದಾಯದಲ್ಲಿದೆ.

**ಅ)** ದಶಮೀ ತಿಥಿಯು ಸೂರ್ಯೋದಯದಿಂದ 55–59 ಘಳಿಗೆ ಒಳಗೆ ಇದ್ದರೆ ಮಾರನೇ ದಿನ ಅಂದರೆ ಏಕಾದಶೀ ತಿಥಿ ಸೂರ್ಯೋದಯದಿಂದ ಇರುವ ದಿನ ಆಚರಣೆ ಮಾಡಬಹುದು. ಆದರೆ ದಶಮೀ ತಿಥಿಯು 56–00 ಘಳಿಗೆ (ಅರುಣೋದಯಕಾಲ) ಅಥವಾ ಅದಕ್ಕೂ ಅಧಿಕವಾಗಿ ಇದ್ದಲ್ಲಿ ಮಾರನೇದಿನ ಅಂದರೆ ಏಕಾದಶೀ ತಿಥಿಯು ಇರುವ ದಿನ ಏಕಾದಶೀ ಆಚರಣೆ ಮಾಡಬಾರದು. ಅದಕ್ಕೂ ಮಾರನೇದಿನ ಅಂದರೆ ದ್ವಾದಶೀ ತಿಥಿಯ ದಿನ ಏಕಾದಶೀ ಆಚರಣೆ ಮಾಡಬೇಕು.

ಆ) ಸೂರ್ಯೋದಯದಿಂದ ನವಮೀ ತಿಥಿಯು ಸ್ವಲ್ಪ ಸಮಯವಿದ್ದು ನಂತರ ದಶಮೀ ತಿಥಿಯು ಇದ್ದು ಮಾರನೇ ದಿನದ ಸೂರ್ಯೋದಯಕ್ಕೆ ಮೊದಲು ದಶಮೀ ತಿಥಿಯು ಮುಗಿದಿದ್ದರೂ ಸಹ ಮಾರನೇದಿನ ಅಂದರೆ ಏಕಾದಶೀ ತಿಥಿಯು ಇರುವ ದಿನ ಏಕಾದಶೀ ಆಚರಣೆ ಮಾಡಬಾರದು. ಅದಕ್ಕೂ ಮಾರನೇ ದಿನ ಅಂದರೆ ದ್ವಾದಶೀ ತಿಥಿಯ ದಿನ ಏಕಾದಶೀ ಆಚರಣೆ ಮಾಡಬೇಕು.

ಇ) ಏಕಾದಶೀ ತಿಥಿಯು ಸೂರ್ಯೋದಯದಿಂದ ದಿನಪೂರ್ತಿ (60–00ಘಳಿಗೆ) ಇದ್ದು ಮಾರನೇ ದಿನ ಸೂರ್ಯೋದಯದ ನಂತರವೂ ಸ್ವಲ್ಪ ಕಾಲ ಉಳಿದಿದ್ದರೆ ಪೂರ್ಣವಾಗಿ ಏಕಾದಶೀ ತಿಥಿ ಇರುವ ದಿನ ಏಕಾದಶೀ ಆಚರಣೆ ಮಾಡದೆ ಮಾರನೇ ದಿನ ಅಂದರೆ ಸೂರ್ಯೋದಯದಿಂದ ಸ್ವಲ್ಪ ಉಳಿದಿರುವ ದಿನ ಏಕಾದಶೀ ಆಚರಿಸಬೇಕು.

ಈ) ದ್ವಾದಶೀ ತಿಥಿಯು ಸೂರ್ಯೋದಯದಿಂದ ದಿನಪೂರ್ತಿ (60–00 ಘಳಿಗೆ ) ಇದ್ದು ಮಾರನೇ ದಿನಸೂರ್ಯೋದಯದ ನಂತರವೂ ಸ್ವಲ್ಪಕಾಲ ಉಳಿದಿದ್ದರೆ ಏಕಾದಶೀ ತಿಥಿಯು ಇರುವ ದಿನ ಏಕಾದಶೀ ಆಚರಿಸದೇ ಪೂರ್ಣವಾಗಿ ದ್ವಾದಶೀ ತಿಥಿ ಇರುವ ದಿನಏಕಾದಶೀ ಆಚರಿಸಬೇಕು. ಯಾವಾಗಲೂ ಏಕಾದಶೀ ಆಚರಣೆ ಮಾಡಿದ ದಿನದ ಮಾರನೇದಿನ ದ್ವಾದಶೀ ಪಾರಣೆ. ಹರಿವಾಸರ ಎಂಬ ಆಚರಣೆಯು ತೆಂಕಲೆ ಶ್ರೀವೈಷ್ಣವರಲ್ಲಿ ಬಳಕೆಯಲ್ಲಿ ಇಲ್ಲ. ವಡಕಲೆ ಶ್ರೀವೈಷ್ಣವರಲ್ಲಿ ಹರಿವಾಸರ ಇರುವ ಸಮಯದ ನಂತರ ದ್ವಾದಶೀ ಪಾರಣೆ ಮಾಡುವ ಸಂಪ್ರದಾಯವಿದೆ.

**4. ಶ್ರೀವೈಷ್ಣವರಲ್ಲಿ ರಾತ್ರಿ ಜನನ, ಮರಣ ಮತ್ತು ರಜೋದರ್ಶನವು ಸಂಭವಿಸಿದಲ್ಲಿ ಆಶೌಚದ ದಿನಗಣನೆಯನ್ನು ಈ ಕೆಳಕಂಡಂತೆ ಮಾಡಬೇಕು. :** ಸೂರ್ಯಾಸ್ತದ ನಂತರ 1ಘಂ. 30ನಿಮಿಷ (ಮೂರುಮುಕ್ಕಾಲು ಘಳಿಗೆಗಳು) ಸಾಯಂ ಸಂಧ್ಯೆಯಾಗುತ್ತದೆ ಮತ್ತು ಸೂರ್ಯೋದಯಕ್ಕೆ ಮೊದಲು 1ಘಂ. 30ನಿಮಿಷಗಳು (ಮೂರುಮುಕ್ಕಾಲು ಘಳಿಗೆಗಳು) ಪ್ರಾತಸ್ಸಂಧ್ಯೆಯಾಗುತ್ತದೆ. ಈ ಎರಡು ಸಂಧ್ಯಾಕಾಲವನ್ನು ಬಿಟ್ಟು ಉಳಿಕೆ ಇರುವ ಕಾಲವನ್ನು ರಾತ್ರಿ ಎಂದೂ 'ತ್ರಿಯಾಮಾ' ಎಂದೂ ಕರೆಯುತ್ತಾರೆ. (ಅಂದರೆಮೂರು ಯಾಮಗಳಿಂದ ಕೂಡಿದ್ದು) ಆದ್ದರಿಂದ ಆಯಾದಿನದ ಸೂರ್ಯಾಸ್ತದ ನಂತರ 1–30ಘಂಟೆ ಕಾಲವನ್ನು ಬಿಟ್ಟು ಮತ್ತು ಮಾರನೇದಿನದ ಸೂರ್ಯೋದಯಕ್ಕೆ ಮೊದಲು 1–30 ಘಂಟೆ ಕಾಲವನ್ನು ಬಿಟ್ಟು ಉಳಿದ ಕಾಲವನ್ನು 3 ಭಾಗಮಾಡಿ ಅದರಲ್ಲಿ ಮೊದಲೆರಡು ಭಾಗಗಳನ್ನು ಕಳೆದು ಮೂರನೇ ಭಾಗದಲ್ಲಿ ಆದರೆ ಮಾರನೇ ದಿನದ ಆಶೌಚದ ಗಣನೆಗೆ ತೆಗೆದುಕೊಳ್ಳಬೇಕು. ಮೊದಲೆರಡು ಭಾಗದಲ್ಲಿಯಾಗಿದ್ದರೆ ಹಿಂದಿನ ದಿನದ ಆಶೌಚದ ಗಣನೆಗೆ ತೆಗೆದುಕೊಳ್ಳಬೇಕು. ರಾತ್ರಿಯ 3ನೇ ಭಾಗವು ಸಾಮಾನ್ಯವಾಗಿ ರಾತ್ರಿ 1–45 ರಿಂದ 2–15ರ ಒಳಗೆ ಆಯಾದಿನದ ಸೂರ್ಯಾಸ್ತ ಮತ್ತು ಮಾರನೆಯ ದಿನದ ಸೂರ್ಯೋದಯವನ್ನು ಅನುಸರಿಸಿ ಪ್ರಾರಂಭವಾಗುತ್ತದೆ. **ಸಾಮಾನ್ಯವಾಗಿ ಎಲ್ಲಾ ಶ್ರೀವೈಷ್ಣವರು** ಜನನ, ಮರಣ ಮತ್ತು ರಜೋದರ್ಶನಕ್ಕೂ ಸಹ ಆಶೌಚದ ದಿನ ಗಣನೆಗೆ ಮೇಲೆ ತಿಳಿಸಿರುವ ರಾತ್ರಿಯ 3 ಭಾಗದ ಪದ್ಧತಿಯನ್ನು ಅನುಸರಿಸುತ್ತಾರೆ. **ಆದರೆ ಮಂಡಯಂ ಶ್ರೀವೈಷ್ಣವರಲ್ಲಿ** ರಜೋ ದರ್ಶನದ ಆಶೌಚಕ್ಕೆ (ಮುಟ್ಟಾಗುವುದಕ್ಕೆ) ಮಾತ್ರ ಮೇಲೆ ಹೇಳಿರುವ ರಾತ್ರಿಯನ್ನು ಮೂರು ಭಾಗ ಮಾಡುವ ಪದ್ಧತಿಯನ್ನು ಅನುಸರಿಸುತ್ತಾರೆ. **ಮಂಡಯಂ ಶ್ರೀವೈಷ್ಣವರಲ್ಲಿ** ಜನನ ಅಥವಾ ಮರಣವು ಸಂಭವಿಸುವ ಕಾಲವು ಆಯಾ ದಿನದ ಸೂರ್ಯೋದಯಕ್ಕೆ ಮೊದಲು 1 ಘಂಟೆ 36 ನಿಮಿಷ( ಅಂದರೆ 4 ಘಳಿಗೆ) ಒಳಗೆ ಆಗಿದ್ದಲ್ಲಿ ಆಶೌಚಕ್ಕೆ ಅಂದಿನ ಗಣನೆಗೆ ತೆಗೆದುಕ್ಕೊಳ್ಳಬೇಕು. ಅದಕ್ಕೂ ಮೊದಲು ಆಗಿದ್ದರೆ ಹಿಂದಿನ ದಿನದ ಆಶೌಚದ ಗಣನೆಗೆ ತೆಗೆದುಕೊಳ್ಳಬೇಕು. ಈ ಕಾಲವನ್ನು ಅರುಣೋದಯಕಾಲವೆಂದು ಶಾಸ್ತ್ರಗಳಲ್ಲಿ ಹೇಳಿದೆ.

**5. ಶ್ರಾದ್ಧ ತಿಥಿ ವಿಚಾರ: ಅ)** ಶ್ರಾದ್ಧವನ್ನು ಅಪರಾಹ್ಣಕಾಲದಲ್ಲಿ ಆಚರಿಸಬೇಕು. ಅಪರಾಹ್ಣವೆನ್ನುವುದು ಅಹ: ಪ್ರಮಾಣದ 4ನೇ ಭಾಗ. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಇರುವ ಕಾಲ ಅಹ: ಪ್ರಮಾಣ. ಅದರಲ್ಲಿ 1ನೇ ಭಾಗ ಪ್ರಾತ: , 2ನೇ ಭಾಗ ಸಂಗವ, 3ನೇಭಾಗ ಮಧ್ಯಾಹ್ನ 4ನೇ ಭಾಗ ಅಪರಾಹ್ಣ; 5ನೇ  ಭಾಗ ಸಾಯಂ. ಅಮಾವಾಸ್ಯೆಯೂ ಸಹ ದರ್ಶ ಶ್ರಾದ್ಧವಾದುದರಿಂದ ಶ್ರಾದ್ಧತಿಥಿಯಾಗಲೀ, ಅಮಾವಾಸ್ಯೆ ತಿಥಿಯಾಗಲಿ ಅಪರಾಹ್ಣ ಕಾಲದಲ್ಲಿ ಅಧಿಕ ವ್ಯಾಪ್ತಿ ಯಾವದಿನ ಇದೆಯೋ ಆ ದಿನವೇ ಆ ತಿಥಿಯನ್ನು ಅಥವಾ ಅಮಾವಾಸ್ಯೆಯನ್ನು ಆಚರಿಸಬೇಕು. ಅದನ್ನೇ ತಿಥಿ ಕಾಲಂನಲ್ಲಿ ಸೂಚಿಸಲಾಗಿದೆ. ಅಮಾವಾಸ್ಯಾ ತರ್ಪಣವನ್ನೂ ಸಹ ಅಪರಾಹ್ಣ ಕಾಲದಲ್ಲಿ ಮಾಡಬೇಕು.

ಆ) ಸಾಮಾನ್ಯವಾಗಿ ಶ್ರೀವೈಷ್ಣವರಲ್ಲಿ ಸೂರ್ಯಸಿದ್ಧಾಂತ ಮತ್ತು ವಾಕ್ಯ ಗಣಿತದ ಅನುಸಾರ ಚಾಂದ್ರ ಸೌರಮಾಸಗಳನ್ನು ಆಚರಿಸುತ್ತಾರೆ. ಆದುದರಿಂದ ಸೂರ್ಯಸಿದ್ಧಾಂತ ಮತ್ತು ವಾಕ್ಯ ಗಣಿತದ ಅನುಸಾರ ಪ್ರತ್ಯೇಕವಾಗಿ ಆಚರಣಾ ಕೈಪಿಡಿಗಳನ್ನು ತಯಾರಿಸಲಾಗಿದೆ. ಕೆಲವರು ಶ್ರಾದ್ಧ ತಿಥಿಗಳಿಗೆ ಚಾಂದ್ರಮಾಸವನ್ನು ಮತ್ತು ಹುಟ್ಟಿದಹಬ್ಬ/ ತಿರುನಕ್ಷತ್ರಗಳಿಗೆ ಸೌರಮಾಸವನ್ನು ಆಚರಿಸುತ್ತಾರೆ. ಕೆಲವರು ಶ್ರಾದ್ಧ ತಿಥಿಗಳಿಗೂ ಸಹ ಸೌರಮಾಸವನ್ನು ಆಚರಿಸುತ್ತಾರೆ. ಆದುದರಿಂದ ಶ್ರಾದ್ಧ ತಿಥಿಗಳ ಕಾಲಂನಲ್ಲಿ ಚಾಂದ್ರ ಮತ್ತು ಸೌರಮಾನ ಅನುಸರಿಸಿ ಶ್ರಾದ್ಧ ತಿಥಿಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಅತಿಥಿ ಎಂದಿರುವ ದಿನ ಮತ್ತು ಶೂನ್ಯತಿಥಿ ಎಂದಿರುವ ದಿನ ಯಾವ ತಿಥಿಯ ಶ್ರಾದ್ಧವು ಆಚರಿಸುವ ಹಾಗಿಲ್ಲ. ಅತಿಥಿ ಎನ್ನುವುದು ಚಾಂದ್ರ ಮತ್ತು ಸೌರಮಾನಗಳೆರಡರಲ್ಲೂ ಬರಬಹುದು. ಶೂನ್ಯತಿಥಿಯು ಸೌರಮಾಸದಲ್ಲಿ ಮಾತ್ರ ಬರುವುದು. ಒಂದು ಸೌರಮಾಸದಲ್ಲಿ 2 ತಿಥಿಗಳು ಬಂದರೆ ಒಂದು ಶೂನ್ಯತಿಥಿಯಾಗುತ್ತದೆ. ಮತ್ತೊಂದು ಶ್ರಾದ್ಧ ತಿಥಿಯಾಗುತ್ತದೆ. ಸಾಮಾನ್ಯವಾಗಿ ಎರಡನೇ ತಿಥಿಯಲ್ಲಿ ಶ್ರಾದ್ಧವನ್ನು ಆಚರಿಸಬೇಕು. ಆದರೆ ಎರಡನೇ ತಿಥಿಯು ಸಂಕ್ರಮಣ ದೋಷದಿಂದ ಕೂಡಿದ್ದರೆ ಮೊದಲನೆಯ ತಿಥಿಯಲ್ಲಿ ಶ್ರಾದ್ಧ ಆಚರಣೆ. ಚಾಂದ್ರಮಾಸದಲ್ಲಿ ಒಂದು ತಿಂಗಳಲ್ಲಿ ಎರಡು ತಿಥಿಗಳು ಬರುವ ಸಂಭವವಿಲ್ಲ.

ಸೌರಮಾಸ ರೀತಿ ಶ್ರಾದ್ಧ ತಿಥಿ ಆಚರಿಸುವಾಗ ವೃಶ್ಚಿಕ, ಧನುಸ್ಸು ಮತ್ತು ಮಕರ ಮಾಸಗಳಲ್ಲಿ ಲುಪ್ತತಿಥಿ ಅಂದರೆ ಒಂದು ತಿಥಿಯು ಬರದೆ ಇರುವುದು ಉಂಟು. ಅಂತಹ ಸಂದರ್ಭಗಳಲ್ಲಿ ಪ್ರತ್ಯಾಬ್ದಿಕ (ಪ್ರತಿ ವರ್ಷ ಬರುವ) ಮತ್ತು ಪ್ರಥಮಾಬ್ದಿಕ (ಮೊದಲನೆಯ ವರ್ಷದ) ಶ್ರಾದ್ಧವನ್ನು ಮೃತರಾದವರು ಮೃತಪಟ್ಟಾಗ ಇದ್ದ ಚಾಂದ್ರಮಾಸವನ್ನು ಅನುಸರಿಸಿ ಪ್ರತ್ಯಾಬ್ದಿಕ ಶ್ರಾದ್ಧ ಮತ್ತು ಪ್ರಥಮಾಬ್ದಿಕ ಶ್ರಾದ್ಧವನ್ನು ಆಚರಿಸಬೇಕು.

ಇ) ತೆಂಕಲೆ ಶ್ರೀವೈಷ್ಣವರಲ್ಲಿ ಏಕಾದಶೀ ಆಚರಣೆಯ ದಿನ ಶ್ರಾದ್ಧ ಆಚರಿಸುವ ಸಂಪ್ರದಾಯವಿಲ್ಲ. ಆದುದರಿಂದ ಏಕಾದಶೀ ಆಚರಣೆಯ ದಿನ ಬರುವ ಏಕಾದಶೀ ತಿಥಿ ಅಥವಾ ದ್ವಾದಶೀ ತಿಥಿ ಶ್ರಾದ್ಧವನ್ನು ಮಾರನೇ ದಿನ ಅಂದರೆ ದ್ವಾದಶೀ ಪಾರಣೆ ದಿನ ಆಚರಿಸಬೇಕು. ಈ ವಿಷಯವನ್ನು ಆಯಾ ದಿನಗಳಲ್ಲಿ ಸೂಚಿಸಿದೆ. ಹಾಗೆಯೇ ಶ್ರೀ ಕೃಷ್ಣಜಯಂತೀ ದಿನವೂ ಸಹ ಶ್ರಾದ್ಧಾಚರಣೆಯನ್ನು ಮಾಡುವುದು ಸಂಪ್ರದಾಯದಲ್ಲಿ ಇಲ್ಲ. ಇದನ್ನು ಆ ದಿನದಲ್ಲಿ ತಿಳಿಸಿದೆ.ದ್ವಾದಶೀ ಪಾರಣೆ ದಿನ ಏಕಾದಶೀ ಅಥವಾ ದ್ವಾದಶೀ ತಿಥಿಯ ಶ್ರಾದ್ಧವನ್ನು ಆಚರಿಸುವಾಗ ಆ ಕಾಲದಲ್ಲಿರುವ ತಿಥಿ ನಕ್ಷತ್ರಗಳನ್ನು ಹೇಳಿ ಕೊನೆಯಲ್ಲಿ 'ಪೂರ್ವೇದ್ಯು: ಪ್ರಾಪ್ತ (ಏಕಾದಶೀ ಅಥವಾ ದ್ವಾದಶೀ ಯಾವ ತಿಥಿಯೋ ಆ ತಿಥಿಯನ್ನು) ತಿಥಿಶ್ರಾದ್ಧಂ ಸದ್ಯೈವಮ್ ಅದ್ಯ ಕರಿಷ್ಯೇ' ಎಂದು ಸಂಕಲ್ಪ ಮಾಡಬೇಕು. ಏಕಾದಶೀ ತಿಥಿ ಅಪರಾಹ್ಣದಲ್ಲಿ ವ್ಯಾಪ್ತಿ ಇರುವ ದಿನ ಏಕಾದಶೀ ಆಚರಣೆ ಇಲ್ಲದಿದ್ದರೆ ಅಂದೇ ಏಕಾದಶೀ ತಿಥಿ ಶ್ರಾದ್ಧವನ್ನು ಆಚರಿಸಬೇಕು.ಯಾವಾಗಲೂ ಹಿಂದಿನ ದಿನದ ತಿಥಿಯ ಶ್ರಾದ್ಧವನ್ನು ಆಚರಿಸುವಾಗ– ಪೂರ್ವೇದ್ಯು: ಪ್ರಾಪ್ತ...... ತಿಥಿ ಶ್ರಾದ್ಧಂ ಎಂದೂ: ಆಶೌಚ ಮುಗಿದ ನಂತರ ಆಚರಿಸುವ ಶ್ರಾದ್ಧದಲ್ಲಿ ಜಾತಾಶೌಚ ಅಥವಾ ಮೃತಾಶೌಚ ಮಧ್ಯೇ ಪ್ರಾಪ್ತ...... ತಿಥಿಶ್ರಾದ್ಧಮ್ ಸದ್ಯೈವಂ ಅದ್ಯ ಕರಿಷ್ಯೇ ಎಂದು ಹೇಳಬೇಕು. ಆದರೆ ವಡಕಲೈ ಶ್ರೀವೈಷ್ಣವರು ಏಕಾದಶೀ ಆಚರಣೆ ಇರುವ ದಿವಸ ಬರುವ ಏಕಾದಶೀ ಅಥವಾ ದ್ವಾದಶೀ ತಿಥಿಯ ಶ್ರಾದ್ಧವನ್ನೂ ಸಹ ಅಂದೇ ಆಚರಿಸುತ್ತಾರೆ. ಈ ಸೂಚನೆಯನ್ನು ಆಯಾ ದಿನಗಳಲ್ಲಿ ನೀಡಿದೆ. ಹಾಗೆಯೇ ಶ್ರೀ ಜಯಂತೀ ದಿನವೂ ಅಂದಿನ ತಿಥಿ ಶ್ರಾದ್ಧವನ್ನೂ ಸಹ ವಡಕಲೈಯವರು ಅಂದೇ ಆಚರಿಸುತ್ತಾರೆ.ತೆಂಕಲೈಯವರು ಶ್ರೀ ಜಯಂತೀ ದಿನ ಬರುವ ತಿಥಿಯ ಶ್ರಾದ್ಧವನ್ನು ಮಾರನೇದಿನ ಆಚರಿಸುತ್ತಾರೆ. ಶ್ರಾದ್ಧದ ದಿನ ಅಮಾವಾಸ್ಯಾ ಆಚರಣೆ ಇದ್ದರೆ ಶ್ರಾದ್ಧ ಮುಗಿಸಿ ನಂತರ ಅಮಾವಾಸ್ಯಾ ತರ್ಪಣವನ್ನು ಆಚರಿಸಬೇಕು. ಶ್ರಾದ್ಧದ ದಿನ ಸಂಕ್ರಮಣ ತರ್ಪಣ ಬಂದರೆ ಸಂಕ್ರಮಣದ ಪುಣ್ಯಕಾಲವು ಯಾವಾಗ ಇರುತ್ತದೋ ಅಂದರೆ ಶ್ರಾದ್ಧಕ್ಕೆ ಮೊದಲೋ ಅಥವಾ ಅನಂತರವೋ ಅದನ್ನು ಅನುಸರಿಸಿ ಮೊದಲು ಇದ್ದರೆ ಮೊದಲು ಅಥವಾ ಅನಂತರ ಇದ್ದರೆ ಅನಂತರದಲ್ಲೂ ಆಚರಿಸಬೇಕು.ಅಮಾವಾಸ್ಯಾ ಆಚರಣೆ ದಿನ ಉತ್ತರಾಯಣ, ದಕ್ಷಿಣಾಯನ, ಮೇಷವಿಷುವ ಮತ್ತು ತುಲಾವಿಷುವ ಯಾವುದಾದರೂ ಒಂದು ಸಂಕ್ರಮಣ ಪುಣ್ಯಕಾಲ ಆಚರಣೆ ಇದ್ದರೆ ಅಮಾವಾಸ್ಯಾ ಆಚರಣೆಯನ್ನು ಬಿಟ್ಟು ಆಯಾ ಪುಣ್ಯಕಾಲಗಳ ಆಚರಣೆಯ ತರ್ಪಣವನ್ನು ಮಾತ್ರ ಆಯಾ ಪುಣ್ಯಕಾಲಗಳಲ್ಲಿ ಮಾಡಬೇಕು. ಜಾತಾಶೌಚ (ಮಕ್ಕಳು ಹುಟ್ಟಿನಿಂದ ಬರುವ ಆಶೌಚ) ಮತ್ತು ಮೃತಾಶೌಚ (ಸಾವಿನಿಂದ ಬರುವ ಆಶೌಚ) ವಿರುವಾಗ ಅಮಾವಾಸ್ಯಾ ಮತ್ತು ಸಂಕ್ರಮಣತರ್ಪಣಗಳನ್ನು ಮಾಡಕೂಡದು. ಆದರೆ ಸೂರ್ಯಗ್ರಹಣ ಅಥವಾ ಚಂದ್ರ ಗ್ರಹಣಗಳ ಪುಣ್ಯಕಾಲಗಳಲ್ಲಿ ಮಾತ್ರ ಸ್ನಾನಮಾಡಿ ತರ್ಪಣಾಚರಣೆಯನ್ನು ಮಾಡಬೇಕು. ಆ ಗ್ರಹಣ ಇರುವವರೆಗೆ ಆಶೌಚದಿಂದ ತರ್ಪಣಾಧಿಕಾರಿಗಳು ನಿವೃತ್ತಿ ಹೊಂದುತ್ತಾರೆ. ಅಮಾವಾಸ್ಯಾ ಅಥವಾ ಸಂಕ್ರಮಣ ಪುಣ್ಯಕಾಲಗಳಲ್ಲಿ ಯಾವುದಾದೂ ಒಂದು ಅಥವಾ ಎರಡೂ ಗ್ರಹಣದ ದಿನ ಸಂಭವಿಸಿದರೆ ಗ್ರಹಣ ನಿಮಿತ್ತ ತರ್ಪಣ ಮಾತ್ರ ಮಾಡಬೇಕು.ವಿಷ್ಣುಪದ ಅಥವಾ ಷಡಶೀತಿ ಪುಣ್ಯಕಾಲದಿನ ಅಮಾವಾಸ್ಯಾ ಸಂಭವಿಸಿದರೆ ಅಮಾವಾಸ್ಯಾ ನಿಮಿತ್ತ ತರ್ಪಣ ಮಾತ್ರ ಮಾಡಬೇಕು. ಸಂಕ್ರಮಣ ನಿಮಿತ್ತ ತರ್ಪಣವನ್ನು ಆಯಾ ದಿನಗಳಲ್ಲಿ ಸೂಚಿಸಿರುವ ಪುಣ್ಯಕಾಲದ ಅವಧಿಯಲ್ಲಿ ಮಾಡಬೇಕು.ಅಮಾವಾಸ್ಯಾ ತರ್ಪಣವನ್ನು ಅಪರಾಹ್ಣ ಕಾಲದಲ್ಲಿ ಮಾಡಬೇಕು.ಪ್ರಥಮಾಬ್ದಿಕ (ಮೊದಲನೇ ವರ್ಷದ) ಶ್ರಾದ್ಧ ಮತ್ತು ಪ್ರತ್ಯಾಬ್ದಿಕ (ಪ್ರತಿವರ್ಷ) ಶ್ರಾದ್ಧದಿನ ಆಶೌಚವಿದ್ದರೆ ಆಶೌಚ ನಿವೃತ್ತಿ ಹೊಂದಿದ ದಿನ ಅಥವಾ ಮುಂದಿನ ಅಮಾವಾಸ್ಯಾ ದಿನದಂದು ಆಚರಿಸಬೇಕು.ಅನಿವಾರ್ಯ ಕಾರಣಗಳಿಂದ ಶ್ರಾದ್ಧ ತಿಥಿಯ ದಿನ ಶ್ರಾದ್ಧ ಆಚರಿಸಲು ಆಗದಿದ್ದರೆ ಮುಂದೆ ಬರುವ ಅಮಾವಾಸ್ಯಾ ದಿನ ಆಚರಿಸಬೇಕು.ತಮ್ಮ ಪಿತೃಗಳ ಶ್ರಾದ್ಧ ತಿಥಿ ತಿಳಿಯದಿದ್ದರೆ ತಿಂಗಳು ತಿಳಿದಿದ್ದರೆ ಆ ತಿಂಗಳ ಅಮಾವಾಸ್ಯಾದಿನಆಚರಿಸಬೇಕು.ತಿಂಗಳೂ ತಿಳಿಯದಿದ್ದರೆ ಆಷಾಢ(ಆಡಿ) ಅಥವಾ ಮಾಘ(ಕುಂಭ) ಮಾಸಗಳಲ್ಲಿ ಆಚರಿಸಬೇಕು.(ಅಮಾವಾಸ್ಯಾ ದಿನ)

**6. ಸೌರ ಚಾಂದ್ರಮಾನ ವಿಚಾರ :**
ಸೂರ್ಯನ ಗತಿಯನ್ನು ಅನುಸರಿಸಿ ಬರುವುದು ಸೌರಮಾನ.ಸೂರ್ಯನು ಒಂದೊಂದು ರಾಶಿಯಿಂದ ಸಂಚರಿಸಿ 12 ರಾಶಿಗಳನ್ನು ಸಂಚರಿಸಲು ಅಗುವ ಕಾಲ ಒಂದು ಸೌರವರ್ಷ. ಸೂರ್ಯಚಂದ್ರರಗತಿಯ ಅಂತರದಿಂದ ಉಂಟಾಗುವುದು ಚಾಂದ್ರಮಾನ. ಶುಕ್ಲಪಕ್ಷ ಪ್ರಥಮಾದಿಂದ ಕೃಷ್ಣಪಕ್ಷ ಅಮಾವಾಸ್ಯಾವರೆಗೆ ಒಂದು ಚಾಂದ್ರಮಾಸದಂತೆ 12 ತಿಂಗಳಕಾಲ ಒಂದು ಚಾಂದ್ರ ಸಂವತ್ಸರ. ಆದುದರಿಂದ ತಿಥಿ ನಕ್ಷತ್ರ ಮುಂತಾದವುಗಳನ್ನು ನಮ್ಮ ಆಚರಣೆಗಳಿಗೆ ಉಪಯೋಗಿಸುವುದರಿಂದ ಸೌರಮಾನ ಮತ್ತು ಚಾಂದ್ರಮಾನ ಎರಡೂ ನಮಗೆ ಗ್ರಾಹ್ಯ. ಅದುದರಿಂದ ಪ್ರತ್ಯೇಕವಾಗಿ ನಾವು ಚಾಂದ್ರಮಾನ ಅನುಸರಿಸುವವರು ಮತ್ತು ನಾವು ಸೌರಮಾನ ಅನುಸರಿಸುವವರು ಎಂದು ತಿಳಿದಿರುವುದು ತಪ್ಪು ತಿಳುವಳಿಕೆ. ಎಲ್ಲರಿಗೂ ಎರಡು ಮಾನವೂ ತಮ್ಮ ತಮ್ಮ ಕರ್ಮಾಚರಣೆಗಳಿಗೆ, ಹಬ್ಬಗಳ ಆಚರಣೆಗೆ ಬೇಕಾಗಿರುವುದು. ಇದರ ತಿಳುವಳಿಕೆ ಎಲ್ಲರಿಗೂ ಇರಲಿ ಎಂದು ಈ ವಿವರಣೆಯನ್ನು ತಿಳಿಸಲಾಗಿದೆ. ಅದುದರಿಂದಲೇ ಈ ಕೈಪಿಡಿಯಲ್ಲಿ ಎರಡು ಮಾನಗಳನ್ನೂ ನೀಡಲಾಗಿದೆ. ಸೌರಮಾನವೂ ಚಾಂದ್ರಮಾನವೂ ಒಂದನ್ನು ಬಿಟ್ಟು ಒಂದಿರಲು ಆಗುವುದಿಲ್ಲ. ಸೌರಮಾನ ಪಂಚಾಂಗದಲ್ಲೂ ಚಾಂದ್ರಮಾನವನ್ನು ನೀಡಿರುತ್ತಾರೆ. ಚಾಂದ್ರಮಾನ ಪಂಚಾಂಗದಲ್ಲೂ ಸೌರಮಾನವನ್ನು ನೀಡಿರುತ್ತಾರೆ. ನಾವು ಮಾಡುವ ಸಂಕಲ್ಪಗಳಲ್ಲಿ ಚಾಂದ್ರಮಾನ ಮತ್ತು ಸೌರಮಾನಗಳೆರಡನ್ನೂ ಹೇಳುವುದು ಸೂಕ್ತ ಎಂದು ಈ ದಾಸನ ಅಭಿಪ್ರಾಯ.

**7. ಮಾಸಿಕ ಮತ್ತು ಊನ ಮಾಸಿಕ ವಿಚಾರ**
ಮೃತದಿನದಿಂದ 11ನೇ ದಿನ ನಡೆಸುವ ಏಕೋದ್ದಿಷ್ಟ ಶ್ರಾದ್ಧವೇ ಮೊದಲನೆಯ ಮಾಸಿಕ. ಮೃತರಾದವರಿಗೆ ಮೃತರಾದ ವರ್ಷದಲ್ಲಿ ಪ್ರತಿ ತಿಂಗಳಿನಲ್ಲೂ ಮೃತ ತಿಥಿಯಲ್ಲಿ ಮಾಸಿಕ ಶ್ರಾದ್ಧಗಳನ್ನು ಅನುಮಾಸಿಕಗಳೆಂದು ಮೊದಲನೆಯ ಮಾಸದ ತಿಥಿಯಲ್ಲಿ ದ್ವಿತೀಯಾನುಮಾಸಿಕ ಎಂದು ಮುಂದಿನ ಮಾಸಿಕಗಳನ್ನು ತೃತೀಯಾನುಮಾಸಿಕ ಮುಂತಾದ ಅನುಮಾಸಿಕಗಳನ್ನು ಆಚರಿಸಿ ಕೊನೆಯಲ್ಲಿ ಮೊದಲನೆಯ ವರ್ಷದ ಮೃತರಾದ ಮಾಸ ತಿಥಿಯಲ್ಲಿ ಪ್ರಥಮಾಬ್ದಿಕ ಎಂದು ಶ್ರಾದ್ಧ ತಿಥಿಯನ್ನು ಆಚರಿಸಬೇಕು. ಮುಂದಿನ ವರ್ಷಗಳಲ್ಲಿ ಅದೇ ಮಾಸದ ಶ್ರಾದ್ಧ ತಿಥಿಗಳನ್ನು ಪ್ರತ್ಯಾಬ್ದಿಕ ಎಂದು ಆಚರಿಸಬೇಕು. ಮೊದಲನೆಯ ವರ್ಷದ ಪ್ರಥಮಾಬ್ದಿಕ ಶ್ರಾದ್ಧವನ್ನು ಮೃತರಾದ ಮಾಸವು ಅಧಿಕಮಾಸವಾಗಿ ಬಂದರೆ ಅಧಿಕ ಮಾಸದಲ್ಲೇ ಆಚರಿಸಬೇಕು. ಮುಂದಿನ ಪ್ರತಿವರ್ಷದ ಶ್ರಾದ್ಧವನ್ನು ನಿಜಮಾಸದಲ್ಲಿ ಆಚರಿಸಬೇಕು. ಒಂದುವೇಳೆ ಅಧಿಕಮಾಸದಲ್ಲಿ ಮೃತರಾಗಿದ್ದರೆ ಮುಂದೆ ಯಾವ ವರ್ಷದಲ್ಲಾದರೂ ಅದೇ ಮಾಸವು ಅಧಿಕ ಬಂದರೆ ಆಗ ಅಧಿಕ ಮಾಸದಲ್ಲಿ ಪ್ರತ್ಯಾಬ್ದಿಕವನ್ನು ಆಚರಿಸಬೇಕು. ಇದು ಚಾಂದ್ರಮಾಸದಲ್ಲಿ ಶ್ರಾದ್ಧ ಆಚರಿಸುವವರಿಗೆ ಅನ್ವಯಿಸುತ್ತದೆ. ಸೌರಮಾಸದಲ್ಲಿ ಶ್ರಾದ್ಧ ಆಚರಿಸುವವರಿಗೆ ಈ ನಿಯಮವಿಲ್ಲ.
ಮೊದಲನೆಯ ವರ್ಷದಲ್ಲಿ ಮಾಸಿಕಗಳಲ್ಲದೆ 4 ಊನ ಮಾಸಿಕಗಳನ್ನು ಸಹ ಆಚರಿಸಬೇಕು.

1) ಸಪ್ತವಿಂಶತಿ ಊನ ಮಾಸಿಕ ಶ್ರಾದ್ಧ :- ಇದನ್ನು ಮೃತರಾದ ದಿನದಿಂದ (ಆ ದಿನವೂ ಸೇರಿ) 27 ದಿನಗಳ ನಂತರ 28ನೇ ದಿನದಿಂದ ಮೊದಲನೇ ಮಾಸಿಕಕ್ಕೆ ಮೊದಲು (ದ್ವಿತೀಯಾನುಮಾಸಿಕ)ಸಿಗುವ ಎರಡು ಅಥವಾ ಮೂರು ದಿನಗಳಲ್ಲಿ ಒಂದು ದಿನ ಆಚರಿಸಬೇಕು.
2) ತ್ರೈಪಕ್ಷಿಕ ಊನ ಮಾಸಿಕ ಶ್ರಾದ್ಧ :- ಇದನ್ನು ಮೃತರಾದ ದಿನದಿಂದ(ಅದನ್ನೂ ಸೇರಿಸಿ) 40 ದಿನಗಳ ನಂತರ 41ನೇ ದಿನದಿಂದ 45 ದಿನಗಳ ಒಳಗೆ ಮಾಡಬೇಕು. ವಿಷಮ ದಿನ (ಬೆಸದಿನಗಳು ಅಂದರೆ 41–43–45)ಗಳಲ್ಲಿ ಮಾಡುವುದು ಉತ್ತಮ ಪಕ್ಷ. ಅದರಲ್ಲಿ ಆಗದಿದ್ದರೆ ಉಳಿದ 42–44ನೇ ಸಮದಿನಗಳಲ್ಲಿಯಾದರೂ ಮಾಡುವುದು ಒಳ್ಳೆಯದು.
3) ಊನಷಾಣ್ಮಾಸಿಕ ಶ್ರಾದ್ದ :- ಇದನ್ನು ಮೃತರಾದ ದಿನದಿಂದ 170ದಿನಗಳ ನಂತರ 171ನೇ ದಿನದಿಂದ ಆರನೇ ಮಾಸಿಕಕ್ಕೆ (ಸಪ್ತಮಾನುಮಾಸಿಕ) ಮೊದಲು ಸಿಗುವ 7–8 ದಿನಗಳಲ್ಲಿ ಆಚರಿಸಬೇಕು.
4) ಊನಾಬ್ದಿಕ ಶ್ರಾದ್ಧ :
    1) ಮೃತರಾದ ದಿನದಿಂದ ಪ್ರಥಮಾಬ್ದಿಕದ ಮಧ್ಯದಲ್ಲಿ ಅಧಿಕಮಾಸ ಇಲ್ಲದ ವರ್ಷಗಳಲ್ಲಿ 341ನೇ ದಿನದಿಂದ 355 ದಿನಗಳ ಒಳಗೆ ಅಂದರೆ ಪ್ರಥಮಾಬ್ದಿಕ ಶ್ರಾದ್ಧಕ್ಕೆ ಮೊದಲು ಒಂದು ದಿನ ಆಚರಿಸಬೇಕು.
    2) ಮೃತರಾದ ದಿನದಿಂದ ಪ್ರಥಮಾಬ್ದಿಕದ ಮಧ್ಯದಲ್ಲಿ ಅಧಿಕಮಾಸ ಬಂದ ವರ್ಷಗಳಲ್ಲಿ 371ನೇ ದಿನದಿಂದ 385ನೇ ದಿನದ ಒಳಗೆ ಅಂದರೆ ಪ್ರಥಮಾಬ್ದಿಕ ಶ್ರಾದ್ಧದಿನಕ್ಕೆ ಮೊದಲು ಒಂದುದಿನ ಆಚರಿಸಬೇಕು.

ಇದು ಚಾಂದ್ರಮಾಸ ರೀತಿ ಶ್ರಾದ್ಧ ಆಚರಿಸುವವರಿಗೆ ಅನ್ವಯವಾಗುತ್ತದೆ. ಆದ್ದರಿಂದ ಎಲ್ಲರೂ ಸಾಮಾನ್ಯವಾಗಿ ಪ್ರಥಮಾಬ್ದಿಕ ಶ್ರಾದ್ಧವನ್ನು ನಿರ್ಧರಿಸಿ ಅದರ ಹಿಂದಿನ 15 ದಿನಗಳಲ್ಲಿ ಈ ಊನಾಬ್ದಿಕವನ್ನು ಆಚರಿಸುವುದು ಶಾಸ್ತ್ರಸಮ್ಮತವಾಗಿದೆ

**ಊನ ಮಾಸಿಕಗಳನ್ನು ಆಚರಿಸುವಾಗ ಬಿಡಬೇಕಾದ (ಮಾಡಬಾರದ) ದಿನಗಳು.**

ನಂದ ತಿಥಿಗಳು ಎಂದರೆ ಪ್ರಥಮಾ, ಷಷ್ಠೀ ಮತ್ತು ಏಕಾದಶೀ ತಿಥಿಗಳು.
ಅಮಾವಾಸ್ಯಾ ಮತ್ತು ಶುಕ್ಲ ಮತ್ತು ಕೃಷ್ಣಪಕ್ಷ ಚತುರ್ದಶೀ ತಿಥಿಗಳು.
ಶುಕ್ರವಾರ, ಕೃತ್ತಿಕಾ ನಕ್ಷತ್ರ.
ಇದಲ್ಲದೆ ದ್ವಿಪುಷ್ಕರ ಮತ್ತು ತ್ರಿಪುಷ್ಕರ ದಿನಗಳು ಕೂಡದು.
ಮೇಲೆ ತಿಳಿಸಿರುವ ದಿನಗಳಲ್ಲಿ ಊನಮಾಸಿಕಗಳನ್ನು ಮಾಡಬಾರದು.

ತ್ರಿಪುಷ್ಕರ ಎಂದರೆ : ಕೆಳಗೆ ತಿಳಿಸಿರುವ ಭದ್ರ ತಿಥಿಗಳಲ್ಲಿ ಯಾವುದಾದರೊಂದು ತಿಥಿ, ವಾರಗಳಲ್ಲಿ ಯಾವುದಾದರೊಂದು ವಾರ, ಮತ್ತು ತ್ರಿಪಾದಿ ನಕ್ಷತ್ರಗಳಲ್ಲಿ ಯಾವುದಾದರೊಂದು ನಕ್ಷತ್ರ ಇವು ಮೂರೂ ಸೇರಿದರೆ ತ್ರಿಪುಷ್ಕರ.
ದ್ವಿಪುಷ್ಕರ ಎಂದರೆ – ಭದ್ರ ತಿಥಿಯ ಜೊತೆ ಮೂರುವಾರಗಳಲ್ಲಿ ಒಂದುವಾರ ಅಥವಾ
ಮೂರುವಾರಗಳಲ್ಲಿ ಒಂದುವಾರ ಮತ್ತು ತ್ರಿಪಾದಿ ನಕ್ಷತ್ರಗಳಲ್ಲಿ ಒಂದು ನಕ್ಷತ್ರ ಅಥವಾ
ಭದ್ರ ತಿಥಿಯ ಜೊತೆ ತ್ರಿಪಾದಿ ನಕ್ಷತ್ರಗಳಲ್ಲಿ ಒಂದು ನಕ್ಷತ್ರ ಸೇರಿದರೆ ಅದಕ್ಕೆ ದ್ವಿಪುಷ್ಕರ ಎಂದು ಹೆಸರು.
ಭದ್ರ ತಿಥಿಗಳು : ದ್ವಿತೀಯಾ, ಸಪ್ತಮೀ ಮತ್ತು ದ್ವಾದಶೀ ತಿಥಿಗಳು.
ವಾರಗಳು : ಭಾನುವಾರ, ಮಂಗಳವಾರ ಮತ್ತು ಶನಿವಾರ,
ತ್ರಿಪಾದಿ ನಕ್ಷತ್ರಗಳು : ಪುನರ್ವಸು, ವಿಶಾಖಾ, ಪೂರ್ವಭಾದ್ರಪದ, ಉತ್ತರಫಲ್ಗುನೀ( ಉತ್ತರ),ಮತ್ತು ಉತ್ತರಾಷಾಢಾ.
ಪ್ರತ್ಯೇಕವಾಗಿ ಭದ್ರ ತಿಥಿಗಳಾಗಲಿ, ಭಾನುವಾರ,ಮಂಗಳವಾರ,ಶನಿವಾರಗಳಾಗಲಿ, ತ್ರಿಪಾದಿ ನಕ್ಷತ್ರಗಳಾಗಲಿ ದೋಷವಿಲ್ಲಾ.
ಇದರಲ್ಲೂ ಸಂದೇಹಗಳಿದ್ದರೆ ನನ್ನನ್ನು ಸಂಪರ್ಕಿಸಲು ಕೋರಿದೆ.

ಊನಮಾಸಿಕಗಳಿಗೆ ನಿಯಮಿಸಿರುವ ದಿನಗಳಲ್ಲಿ ಮೇಲೆ ತಿಳಿಸಿರುವ ದೋಷವಿಲ್ಲದ ದಿನಗಳು ಸಿಗದಿದ್ದರೆ.ಯಾವುದಾದರೊಂದು ದಿನದಲ್ಲಿ ಶ್ರಾದ್ಧವನ್ನು ಮಾಡುವುದು ಒಳ್ಳೆಯದು, ಬಿಡಬಾರದು. ಆದರೆ ಈ ನಿಯಮಿತ ದಿನಗಳಲ್ಲಿ ಆಶೌಚ ಬಂದರೆ ಆಗ ಊನಮಾಸಿಕ ನಡೆಸುವ ಹಾಗಿಲ್ಲ. ಊನ ಮಾಸಿಕಗಳನ್ನು ನಿಯಮಿಸಿರುವ ದಿನಗಳನ್ನು ಬಿಟ್ಟು ಬೇರೆ ದಿನಗಳಲ್ಲಿ ಮಾಡುವಹಾಗಿಲ್ಲ.

ಮಾಸಿಕಗಳಲ್ಲಿ ಆಶೌಚ ಬಂದರೆ ಮುಂದಿನ ಮಾಸಿಕದ ಜೊತೆ ಸೇರಿಸಿಕೊಂಡು ಮಾಡಬಹುದು ಅಥವಾ ಆಶೌಚ ಮುಗಿದ ದಿನವೂ ಮಾಡಬಹುದು. ಊನಮಾಸಿಕಗಳಿಗೆ ಮೊದಲು ಬರುವ ಮಾಸಿಕಗಳನ್ನು ಮುಗಿಸಿಯೇ ಊನಮಾಸಿಕವನ್ನು ಮಾಡಬೇಕು. ಪ್ರಥಮಾಬ್ದಿಕ (ಮೊದಲನೇ ವರ್ಷದ) ಶ್ರಾದ್ಧ ಮತ್ತು ಪ್ರತ್ಯಾಬ್ದಿಕ (ಪ್ರತಿವರ್ಷ) ಶ್ರಾದ್ಧದಿನ ಆಶೌಚವಿದ್ದರೆ ಆಶೌಚ ನಿವೃತ್ತಿ ಹೊಂದಿದ ದಿನ ಅಥವಾ ಮುಂದಿನ ಅಮಾವಾಸ್ಯಾ ದಿನದಂದು ಆಚರಿಸಬೇಕು.ಮಾಸಿಕಗಳ ಮಧ್ಯದಲ್ಲಿ ಅಧಿಕ ಮಾಸ ಬಂದರೆ ಅಧಿಕ ಮಸದಲ್ಲೂ ಮಾಸಿಕ ಶ್ರಾದ್ಧ ಆಚರಿಸಬೇಕು.

**8)ಅಧಿಕಮಾಸ ವಿಚಾರ :**

ಅಧಿಕಮಾಸವು ಚಾಂದ್ರಮಾಸದಲ್ಲಿ ಮಾತ್ರ ಸಂಭವಿಸುತ್ತದೆ. ಸೌರಮಾಸದಲ್ಲಿ ಇಲ್ಲ. ಅಧಿಕಮಾಸವು ಸಾಮಾನ್ಯವಾಗಿ ಎರಡು ಚಾಂದ್ರ ಸಂವತ್ಸರಗಳಿಗೊಮ್ಮೆ ಸಂಭವಿಸುತ್ತದೆ. ಎರಡು ಸೂರ್ಯ ಸಂಕ್ರಮಣಗಳ ಮಧ್ಯೆ ಎರಡು ಅಮಾವಾಸ್ಯಾಗಳು ಬಂದಲ್ಲಿ ಆ ಚಾಂದ್ರಮಾಸವು ಅಧಿಕವಾಗುತ್ತದೆ. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳಿದರೆ ಒಂದು ಚಾಂದ್ರಮಾಸದಲ್ಲಿ ಸೂರ್ಯ ಸಂಕ್ರಮಣವೇ ಬರದಿದ್ದರೆ ಆ ಚಾಂದ್ರಮಾಸವು ಅಧಿಕಮಾಸವಾಗುತ್ತದೆ. ಸೌರ ವರ್ಷಕ್ಕೆ ಚಾಂದ್ರ ಸಂವತ್ಸರವನ್ನು ಅನುಸರಿಸಿಕ್ಕೊಳ್ಳಲು ಅಧಿಕಮಾಸವನ್ನು ಸೇರಿಸಿಕ್ಕೊಳ್ಳಬೇಕಾಗುತ್ತದೆ. ಈ ಅಧಿಕಮಾಸದಲ್ಲಿ ಮೃತರಾದವರ ಶ್ರಾದ್ಧವನ್ನು ಮುಂದಿನ ವರ್ಷಗಳ ಅದೇಮಾಸದಲ್ಲಿ ಮಾಡಬೇಕಾಗುವುದು. ಮುಂದೆಯೂ ಯಾವ ವರ್ಷದಲ್ಲಾದರೂ ಇದೇ ಮಾಸವು ಅಧಿಕ ಬಂದರೆ ಆವಾಗ ಪ್ರತ್ಯಾಬ್ದಿಕ(ವಾರ್ಷಿಕ) ಶ್ರಾದ್ಧವನ್ನು ಅಧಿಕಮಾಸದಲ್ಲಿ ಮಾಡಬೇಕು. ಅಧಿಕಮಾಸವಲ್ಲದ ಮಾಸದಲ್ಲಿ ಮೃತಪಟ್ಟವರ ಪ್ರತ್ಯಾಬ್ದಿಕ ಶ್ರಾದ್ಧವನ್ನು ನಿಜಮಾಸದಲ್ಲಿ ಮಾಡಬೇಕು. ಅಧಿಕಮಾಸವಲ್ಲದ ಮಾಸದಲ್ಲಿ ಮೃತಪಟ್ಟವರ ಶ್ರಾದ್ಧವನ್ನು ಮೊದಲನೆಯವರ್ಷ (ಪ್ರಥಮಾಬ್ದಿಕ) ಅದೇ ತಿಂಗಳು ಅಧಿಕ ಬಂದರೆ ಆ ಒಂದನೆಯ ವರ್ಷ ಶ್ರಾದ್ಧವನ್ನು ಮಾತ್ರ ಅಧಿಕಮಾಸದಲ್ಲಿ ಮಾಡಬೇಕು. ಮುಂದಿನ ಪ್ರತ್ಯಾಬ್ದೀಕ ಶ್ರಾದ್ಧಗಳನ್ನು ನಿಜಮಾಸದಲ್ಲಿ ಅಥವಾ ಅಧಿಕವಲ್ಲದ ಅದೇಮಾಸದಲ್ಲಿ ಮಾಡಬೇಕು. ಈ ಎಲ್ಲಾ ನಿಯಮಗಳೂ ಚಾಂದ್ರಮಾಸವನ್ನು ಅನುಸರಿಸಿ ಶ್ರಾದ್ಧ ಮಾಡುವವರಿಗೆ ಮಾತ್ರ ಅನ್ವಯಿಸುತ್ತದೆ. ಸೌರಮಾಸ ಅನುಸರಿಸಿ ಶ್ರಾದ್ಧ ಮಾಡುವವರಿಗೆ ಇದು ಅನ್ವಯಿಸುವುದಿಲ್ಲ.

**9)ಕ್ಷಯ ಮಾಸ ವಿಚಾರ :**

ಕ್ಷಯಮಾಸವೂ ಸಹ ಚಾಂದ್ರಮಾನದಲ್ಲೇ ಸಂಭವಿಸುವುದು. ಎರಡು ಸಂಕ್ರಮಣಗಳ ಮಧ್ಯದಲ್ಲಿ ಅಮವಾಸ್ಯೆಯೇ ಸಂಭವಿಸದಿದ್ದರೆ ಆ ಚಾಂದ್ರಮಾಸವು ಕ್ಷಯಮಾಸವಾಗುವುದು. ಇನ್ನೊಂದು ರೀತಿಯಲ್ಲಿ ಹೇಳಿದರೆ ಒಂದು ಚಾಂದ್ರಮಾಸದಲ್ಲಿ ಎರಡು ಸಂಕ್ರಮಣಗಳು ಸಂಭವಿಸಿದರೆ ಆ ಚಾಂದ್ರಮಾಸವು ಕ್ಷಯಮಾಸವಾಗುತ್ತದೆ. ಈ ಹಿಂದೆ 1963–64ರಲ್ಲಿ ಮಾರ್ಗಶಿರ ಕ್ಷಯ ಪುಷ್ಯಮಾಸವು ಬಂದಿತ್ತು. ನಂತರ 1982–83ರಲ್ಲಿ ಪುಷ್ಯಕ್ಷಯ ಮಾಘವು ಬಂದಿತ್ತು. ಒಂದು ಕ್ಷಯಮಾಸ ಸಂಭವಿಸಿ 19 ವರ್ಷಗಳು ಕಳೆದಮೇಲೆ ಯಾವಾಗಬೇಕಾದರೂ ಕ್ಷಯಮಾಸವು ಬರಬಹುದು. ಹಾಗೆ ಕ್ಷಯಮಾಸ ಬಂದಾಗ ಹಿಂದೆ ಮೃತಪಟ್ಟವರ ಶ್ರಾದ್ಧಗಳನ್ನು ಆ ಎರಡು ಮಾಸದ ತಿಥಿಗಳನ್ನು ಒಂದೇ ಮಾಸದ ತಿಥಿಗಳಲ್ಲಿ ಮಾಡಬೇಕು. ಆ ಕ್ಷಯಮಾಸದಲ್ಲಿ ಮೃತಪಟ್ಟವರ ಶ್ರಾದ್ಧವನ್ನು ಯಾವ ತಿಂಗಳೆಂದು ತಿಳಿಯಲು ತಿಥಿಯ ಕಾಲವನ್ನು ಎರಡು ಭಾಗ ಮಾಡಿ ಮೊದಲನೆಯ ಭಾಗದಲ್ಲಿ ಮೃತಪಟ್ಟಿದ್ದರೆ ಮೊದಲನೆಯ ತಿಂಗಳೆಂದು ಎರಡನೆ ಭಾಗದಲ್ಲಿ ಮೃತಪಟ್ಟಿದ್ದರೆ ಎರಡನೆ ತಿಂಗಳೆಂದು ನಿರ್ಣಯಿಸಿಕೊಳ್ಳಬೇಕು. ಇದರಂತೆ ಮುಂದಿನ ಶ್ರಾದ್ಧಗಳನ್ನು ತಿಳಿದುಕೊಳ್ಳಬೇಕು. ಈ ಚಾಂದ್ರಕ್ಷಯಮಾಸಗಳು ಬರುವುದು ಅವಧಿಯಲ್ಲಿ ಚಿಕ್ಕದಾಗಿರುವ ವೃಶ್ಚಿಕ, ಧನುಃ, ಮತ್ತು ಮಕರ ಎಂಬ ಸೌರಮಾಸಗಳಲ್ಲಿ ಮಾತ್ರ. ಕಾರ್ತಿಕಕ್ಷಯ ಮಾರ್ಗಶಿರ ಅಥವಾ ಮಾರ್ಗಶಿರಕ್ಷಯ ಪುಷ್ಯ ಅಥವಾ ಪುಷ್ಯಕ್ಷಯಮಾಘಗಳು ಮಾತ್ರ ಸಂಭವಿಸುತ್ತದೆ. ಈ ಎಲ್ಲಾ ನಿಯಮಗಳು ಕೂಡ ಚಾಂದ್ರಮಾಸ ಅನುಸರಿಸಿ ಶ್ರಾದ್ಧ ಆಚರಿಸುವವರಿಗೆ ಮಾತ್ರ ಅನ್ವಯಿಸುತ್ತದೆ. ಸೌರಮಾಸದಲ್ಲಿ ಶ್ರಾದ್ಧಮಾಡುವವರಿಗೆ ಅನ್ವಯಿಸುವುದಿಲ್ಲ.

**10. ಷಣ್ಣವತಿ ಶ್ರಾದ್ಧ ವಿಚಾರ:**

ಷಣ್ಣವತಿ ಶ್ರಾದ್ಧ ಎಂದರೆ ಒಂದು ವರ್ಷದಲ್ಲಿ ತಮ್ಮ ಮಾತಾ–ಪಿತೃಗಳ ಶ್ರಾದ್ಧಗಳಲ್ಲದೆ 96 ಶ್ರಾದ್ಧಗಳನ್ನು ಆಚರಿಸಬೇಕೆಂಬುದು ಶಾಸ್ತ್ರವಿಧಿ. ಆದರೆ ಅವುಗಳಲ್ಲಿ ಅವರವರ ಮನೆಯ ಪದ್ಧತಿಗಳಂತೆ ಕೆಲವುದನ್ನು ಅನುಸರಿಸುವುದು ಸಂಪ್ರದಾಯದಲ್ಲಿದೆ. ಒಂದು ವರ್ಷದಲ್ಲಿ ಬರುವ 96 ಶ್ರಾದ್ಧ ದಿನಗಳ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

| | |
|---|---|
| 1. ಪ್ರತಿ ತಿಂಗಳ ಅಮಾವಾಸ್ಯಾ | 12 |
| 2. ಪ್ರತಿ ತಿಂಗಳ ಸಂಕ್ರಮಣ ಪುಣ್ಯಕಾಲಗಳು. | 12 |
| 3. ವ್ಯತೀಪಾತ ಯೋಗ. | 13 |
| 4. ವೈಧೃತಿ ಯೋಗ. | 13 |
| 5. ಮಹಾಲಯ ಪಕ್ಷ ದಿನಗಳು.(ಭಾದ್ರಪದ ಕೃಷ್ಣ ಪ್ರಥಮಾ ದಿಂದ ಆಶ್ವಯುಜ ಶುಕ್ಲ ಪ್ರಥಮಾ ವರೆಗೆ) | 16 |
| 6. ಮನ್ವಾದಿಗಳು. | 14 |
| 7. ಕೃತಯುಗಾದಿ,ತ್ರೇತಾಯುಗಾದಿ,ದ್ವಾಪರಯುಗಾದಿ,ಕಲಿಯುಗಾದಿ | 4 |
| 8. ಮಾರ್ಗಶಿರ, ಪುಷ್ಯ, ಮಾಘ, ಮತ್ತು ಫಾಲ್ಗುನ ಮಾಸಗಳ ಕೃಷ್ಣಪಕ್ಷದ ಈ ಕೆಳಗಿರುವ ತಿಥಿಗಳು.<br>ಸಪ್ತಮೀ– ತಿಸ್ರೋಷ್ಟಕಾಃ;<br>ಅಷ್ಟಮೀ– ಅಷ್ಟಕಾ;<br>ನವಮೀ– ಅನ್ವಷ್ಟಕಾ; | 12 |
| ಒಟ್ಟು: | 96 |

ಈ ಮೇಲ್ಕಂಡ ದಿನಗಳಲ್ಲಿ ಶುಭಕಾರ್ಯಗಳನ್ನು ಮಾಡಕೂಡದು.

11) **ಆಯುಷ್ಕರ್ಮ ವಿಚಾರ :**

ಕ್ಷೌರ ಮಾಡಿಸಿಕೊಳ್ಳುವುದಕ್ಕೆ ಆಯುಷ್ಕರ್ಮ ಎಂದು ಹೆಸರಿಸಲಾಗಿದೆ. ಒಳ್ಳೆಯದಿನಗಳಲ್ಲಿ ಕ್ಷೌರ ಮಾಡಿಸಿಕೊಳ್ಳಬೇಕು. ಕ್ಷೌರ ಮಾಡಿಸಿಕೊಳ್ಳಲು ಒಳ್ಳೆಯ ತಿಥಿಗಳು :– (ಶುಕ್ಲ ಮತ್ತು ಕೃಷ್ಣ ಪಕ್ಷಗಳ) ದ್ವಿತೀಯಾ, ತೃತೀಯಾ, ಪಂಚಮೀ, ಸಪ್ತಮೀ, ದಶಮೀ, (ದ್ವಾದಶೀ ಪಾರಣೆ ಇಲ್ಲದ)ತ್ರಯೋದಶೀ . ದಶಮೀ ತಿಥಿಯಲ್ಲಿ ಗಂಡು ಸಂತಾನವಿರುವ ತಂದೆ ಕ್ಷೌರ ಮಾಡಿಸಿಕೊಳ್ಳುವುದಿಲ್ಲವೆಂದು ಕೆಲವರ ಮನೆಯ ಪದ್ಧತಿಯೆಂದು ತಿಳಿಸಿರುತ್ತಾರೆ.

ವಾರಗಳು :– ಭಾನು, ಸೋಮ, ಮತ್ತು ಬುಧವಾರಗಳು ಒಳ್ಳೆಯದು. ಅಣ್ಣ ಇರುವವರು ಗುರುವಾರ ಕ್ಷೌರ ಮಾಡಿಸಿಕೊಳ್ಳಬಾರದು.

ಇದಲ್ಲದೆ ದಿನದ ನಕ್ಷತ್ರಗಳು ತಮ್ಮ ತಮ್ಮ ಜನ್ಮ ನಕ್ಷತ್ರಗಳಿಗೆ ಒಳ್ಳೆಯ ತಾರಾಬಲ ಬರುತ್ತದೆಯೇ ಎಂದು ಪರೀಕ್ಷಿಸಿಕ್ಕೊಳ್ಳಬೇಕು. ತಾರಾಬಲ ನೋಡುವ ಕ್ರಮ : ಜನ್ಮ ನಕ್ಷತ್ರದಿಂದ ಆ ದಿನ ನಕ್ಷತ್ರದವರೆಗೆ ಲೆಖ್ಖ ಹಾಕಿ ಬಂದ ಸಂಖ್ಯೆಯನ್ನು 9 ರಿಂದ ಭಾಗಿಸಿ ಉಳಿಕೆ ಬರುವುದನ್ನು ತಾರಾಬಲವೆಂದು ಕರೆಯುವರು. ಅವುಗಳಲ್ಲಿ 2,4,6,8 ಮತ್ತು 9 ಬಂದರೆ ಒಳ್ಳೆಯ ತಾರೆಗಳು. 1,3,5, ಮತ್ತು 7 ಬಂದರೆ ಅಶುಭ ತಾರೆಗಳು.

ಕಟಕ (ಆಡಿ), ಕನ್ಯಾ(ಪುರಟ್ಟಾಶಿ) ಮತ್ತು ಧನುಃ (ಮಾರ್ಹಳಿ) ಮಾಸಗಳನ್ನು ಕ್ಷೌರಕ್ಕೆ ನಿಷೇಧ ಮಾಡುವ ಸಂಪ್ರದಾಯವಿದೆ.ಇದಲ್ಲದೆ ಮಹಾಲಯ ಪಕ್ಷ (ಪಿತೃಪಕ್ಷ)ವನ್ನೂ ಕ್ಷೌರಕ್ಕೆ ನಿಷೇಧ ಮಾಡುವ ಸಂಪ್ರದಾಯವಿದೆ. ಮೇಲೆ ಹೇಳಿದಂತೆ ತಿಥಿ, ವಾರ, ನಕ್ಷತ್ರ, ಮಾಸ ಮತ್ತು ತಾರಾ ಬಲಗಳನ್ನು ನೋಡಿ ಒಳ್ಳೆಯ ದಿನಗಳಲ್ಲಿ ಮಾಡಿಸಿಕೊಳ್ಳಬೇಕು.

ತಂದೆ ಅಥವಾ ತಾಯಿ ಮತ್ತು ಇತರರಿಗೆ ಕರ್ತೃಗಳಾಗಿ ಶ್ರಾದ್ಧ ಮಾಡುವವರು ಶ್ರಾದ್ಧ ದಿನಕ್ಕೆ ಹಿಂದೆ 15 ದಿನಗಳಲ್ಲಿ ಕ್ಷೌರ ಮಾಡಿಸಿಕೊಳ್ಳಬಾರದು. ತಾವು ಮಾಡುವ ಶ್ರಾದ್ಧದ ಮರುದಿನವೂ ಕ್ಷೌರ ಮಾಡಿಸಿಕೊಳ್ಳಬಾರದು. ತಂದೆ ಮಕ್ಕಳು, ಅಣ್ಣ ತಮ್ಮಂದಿರು ಒಂದೇ ದಿನ ಕ್ಷೌರ ಮಾಡಿಸಿಕೊಳ್ಳಬಾರದು.

ಸೂರ್ಯ ಸಂಕ್ರಮಣದ ದಿನವೂ ಕ್ಷೌರಕ್ಕೆ ನಿಷೇಧ. ಸೂರ್ಯ, ಚಂದ್ರ ಗ್ರಹಣಗಳ ಹಿಂದೆ ಒಂದುವಾರವೂ ಗ್ರಹಣದ ನಂತರ ಎರಡು ಮೂರು ದಿನಗಳೂ ಕ್ಷೌರ ಮಾಡಿಸಿಕೊಳ್ಳಬಾರದು.ನಿಮಂತ್ರಕರು (ಬ್ರಾಹ್ಮಣಾರ್ಥ ಇರುವವರು) ಶ್ರಾದ್ಧದ ದಿನ ಕ್ಷೌರಮಾಡಿಸಿಕೊಳ್ಳುವ ಅನಿವಾರ್ಯತೆ ಇದ್ದಲ್ಲಿ ಕರ್ತಾವಿನ ಗಮನಕ್ಕೆ ತಂದು ಕ್ಷೌರಮಾಡಿಸಿಕೊಳ್ಳಬೇಕು. ಹಾಗೂ ಬ್ರಾಹ್ಮಣಾರ್ಥದ ಮರುದಿನ ಕ್ಷೌರ ಮಾಡಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಇದ್ದಲ್ಲಿ ಮೊದಲು ಸ್ನಾನ ಮಾಡಿ ನಂತರ ಕ್ಷೌರ ಮಾಡಿಸಿಕೊಳ್ಳಬೇಕು.

12). **ಸಾಮಾನ್ಯವಾಗಿ ಈ ಕೆಳಕಂಡ ವಾರಗಳಲ್ಲೂ ತಿಥಿಗಳಲ್ಲೂ ಶುಭ ಕಾರ್ಯಗಳನ್ನು ನಡೆಸಬಹುದು :**

ಭಾನುವಾರ, ಸೋಮವಾರ, ಬುಧವಾರ, ಗುರುವಾರ, ಮತ್ತು ಶುಕ್ರವಾರ ; ಶುಕ್ಲ ಮತ್ತು ಕೃಷ್ಣ ಪಕ್ಷಗಳ ದ್ವಿತೀಯಾ, ತೃತೀಯಾ, ಪಂಚಮೀ, ಸಪ್ತಮೀ, ದಶಮೀ ಮತ್ತು ತ್ರಯೋದಶೀ(ದ್ವಾದಶೀ ಪಾರಣೆ ಇಲ್ಲದ) ತಿಥಿಗಳು. ಆಯಾ ದಿನಗಳ ನಕ್ಷತ್ರಗಳಿಗೆ ತಾರಾಬಲವನ್ನು ನೋಡುವ ಕ್ರಮವನ್ನು ಮೇಲೆ ಆಯುಷ್ಕರ್ಮ ವಿಚಾರದಲ್ಲಿ ತಿಳಿಸಲಾಗಿದೆ. ಕಟಕ(ಆಡಿ),ಕನ್ಯಾ(ಪುರಟ್ಟಾಶಿ), ಮತ್ತು ಧನುಃ(ಮಾರ್ಗಳಿ) ಮುಂತಾದ ಸೌರಮಾನ ಮಾಸಗಳಲ್ಲಿ ಮತ್ತು ಚಾದ್ರಮಾನ ಮಾಸಗಳಲ್ಲಿ ಬರುವ ಅಧಿಕಮಾಸದಲ್ಲಿ ಮತ್ತು ಕ್ಷಯಮಾಸದಲ್ಲಿ ಶುಭ ಕಾರ್ಯಗಳನ್ನು ಮಾಡುವುದಿಲ್ಲಾ.

ಶ್ರೀ ಕೃಷ್ಣ ಜಯಂತೀ ದಿನ ರಾತ್ರಿ ದೇವರಿಗೆ ನೈವೇದ್ಯವಾಗಿ ಶಾತ್ತುಮುರೈ ಆದಮೇಲೆ ಕೆಲವರು ಕೈಯಲ್ಲಿ ಅಕ್ಷತೆಯನ್ನು ಪುಷ್ಪವನ್ನು ಇಟ್ಟುಕೊಂಡು ಈ ಕೆಳಕಂಡ ಶ್ಲೋಕಗಳನ್ನು ಪಠಿಸಿ ಪುಷ್ಪವನ್ನು ಅಕ್ಷತೆಯನ್ನು ಕೃಷ್ಣನಿಗೆ ಸಮರ್ಪಿಸುವ ಪದ್ಧತಿ ಇದೆ:

**1.ಸಿಂಹೇ ಮಾಸೇಽಸಿತೇಪಕ್ಷೇ ರೋಹಿಣ್ಯಾಮಷ್ಟಮೀತಿಥೌ।**
**ಚರಮಾರ್ಥಪ್ರದಾತಾರಂ ಕೃಷ್ಣಂ ವಂದೇ ಜಗದ್ಗುರುಮ್॥**

**2. ತತೋಽಖಿಲಜಗತ್ಪದ್ಮ ಬೋಧಾಯಾಚ್ಯುತಭಾನುನಾ।**
**ದೇವಕೀಪೂರ್ವಸಂಧ್ಯಾಯಾಮ್ ಆವಿರ್ಭೂತಂ ಮಹಾತ್ಮನಾ॥**

ಕೃಷ್ಣನಿಗೆ ಅರ್ಘ್ಯ ಬಿಡುವ ಪದ್ಧತಿ ಇರುವವರು ಈ ಕೆಳಕಂಡ ಶ್ಲೋಕಗಳನ್ನು ಪಠಿಸಿ ಕಾಯಿಸದ ಹಾಲಿನಿಂದ ಅರ್ಘ್ಯ ಬಿಡುವರು :

**1. ಜ್ಯೋತ್ಸ್ನಾಪತೇ! ನಮಸ್ತುಭ್ಯಂ ನಮಸ್ತೇ ಜ್ಯೋತಿಷಾಂಪತೇ! ।**
**ನಮಸ್ತೇ ರೋಹಿಣೀಕಾಂತ ! ಸುಧಾಕುಂಭ! ನಮೋಽಸ್ತು ತೇ॥**

**2. ಕ್ಷೀರೋದಾರ್ಣವಸಂಭೂತ ! ಅತ್ರಿನೇತ್ರಸಮುದ್ಭವ !**
**ಗೃಹಾಣಾರ್ಘ್ಯಂ ಶಶಾಂಕೇದಂ ರೋಹಿಣ್ಯಾ ಸಹಿತೋ ಮುದಾ॥**
**ರೋಹಿಣೀಸಹಿತಾಯ ಚಂದ್ರಾಯ ಇದಮರ್ಘ್ಯಮ್ ಇದಮರ್ಘ್ಯಮ್ ಇದಮರ್ಘ್ಯಮ್.**

**3. ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ।**
**ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ॥**
**ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ।**
**ಗೃಹಾಣಾರ್ಘ್ಯಂ ಮಯಾದತ್ತಂ ದೇವಕ್ಯಾ ಸಹಿತೋ ಹರೇ !॥**
**ದೇವಕೀಸುತಾಯ ಕೃಷ್ಣಾಯ ಇದಮರ್ಘ್ಯಮ್ ಇದಮರ್ಘ್ಯಮ್ ಇದಮರ್ಘ್ಯಮ್.**

ಈ ಪಂಚಾಂಗದಲ್ಲಿ ತಿಳಿಸಿರುವ ಆಚರಣೆಗಳಲ್ಲಿ ಮತ್ತು ವಿಷಯಗಳಲ್ಲಿ ಸಂದೇಹಗಳೇನಾದರೂ ಇದ್ದಲ್ಲಿ ನನ್ನ ದೂರವಾಣಿ ಸಂಖ್ಯೆಗಳಲ್ಲಿ ಅಥವಾ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಲು ಕೋರಿದೆ. ಸೂರ್ಯಸಿದ್ಧಾಂತ ಮತ್ತು ವಾಕ್ಯಗಣಿತ ರೀತಿ ಆಚರಣೆ ಕೈಪಿಡಿಯನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಸಿದ್ಧಪಡಿಸಲಾಗಿದೆ.ಈ ಕೈಪಿಡಿಯ ಅಪೇಕ್ಷೆ ಉಳ್ಳವರು ಈ ಕೆಳಕಂಡವರನ್ನು ಸಂಪರ್ಕಿಸಿ ಉಚಿತವಾಗಿ ಪಡೆಯಬಹುದು.

**ದೂರವಾಣಿ ಸಂಖ್ಯೆಗಳು : 9986057991 ; 9341392792 ; 6360924868 ; 9164154798 ;**

ಇತಿ ಅಡಿಯೇನ್
**ರಂಗರಾಜ ರಾಮಾನುಜ ದಾಸನ್**
**ವಿಳಾಸ : ಎಂ.ಡಿ.ರಂಗರಾಜನ್,**
**#256, ಕುಣಿಗಲ್ ಬೀದಿ**
**ಮೇಲುಕೋಟೆ 571431**
**ಮಂಡ್ಯ ಜಿಲ್ಲೆ, ಕರ್ನಾಟಕ**

**ಸರ್ವದೇಶದಶಾಕಾಲೇಷ್ವವ್ಯಾಹತಪರಾಕ್ರಮಾ।**
**ರಾಮಾನುಜಾರ್ಯದಿವ್ಯಾಜ್ಞಾ ವರ್ಧತಾಮಭಿವರ್ಧತಾಮ್॥**
**ರಾಮಾನುಜಾರ್ಯದಿವ್ಯಾಜ್ಞಾ ಪ್ರತಿವಾಸರಮುಜ್ಜ್ವಲಾ।**
**ದಿಗಂತವ್ಯಾಪಿನೀ ಭೂಯಾತ್ಸಾ ಹಿ ಲೋಕಹಿತೈಷಿಣೀ॥**
**ಶ್ರೀಮನ್ ಶ್ರೀರಂಗಶ್ರಿಯಮ್ ಅನುಪದ್ರವಾಮ್ಅನುದಿನಂ ಸಂವರ್ಧಯ।**
**ಶ್ರೀಮನ್ ಶ್ರೀರಂಗಶ್ರಿಯಮ್ ಅನುಪದ್ರವಾಮ್ಅನುದಿನಂ ಸಂವರ್ಧಯ॥**
**ಅಡಿಯಾರ್ಗಳ್ ವಾಳ, ಅರಂಗನಗರ್ ವಾಳ, ಶಡಗೋಪನ್ ತಂಡಮಿಳ್ನೂಲ್ ವಾಳ,**
**ಕಡಲ್ಶೂಳ್ನ್ದ ಮಣ್ಣುಲಗಮ್ ವಾಳ, ಮಣವಾಳಮಾಮುನಿಯೇ ಇನ್ನುಮೊರುನೂತ್ತಾಂಡಿರುಮ್.**
**ಚಿರಮಭಿವರ್ಧತಾಂ ಶ್ರೀವೈಷ್ಣವ ಶ್ರೀಃ। ಚಿರಮಭಿವರ್ಧತಾಂ ಕೈಂಕರ್ಯಶ್ರೀಃ। ನಿತ್ಯಶ್ರೀಃ ನಿತ್ಯ ಮಂಗಳಂ ಭೂಯಾತ್।**
**ರಾಮಾನುಜಾರ್ಯವಶಗಃ ಪರಿವರ್ತಿಷೀಯ॥**
**ಕೈಂಕರ್ಯನಿತ್ಯನಿರತೈರ್ಭವದೇಕಭೋಗ್ಯೈಃ ನಿತ್ಯೈರನುಕ್ಷಣನವೀನರಸಾರ್ದ್ರಭಾವೈಃ।**
**ನಿತ್ಯಾಭಿವಾಂಛಿತಪರಸ್ಪರನೀಚಭಾವೈಃ ಮದ್ದೈವತೈಃ ಪರಿಜನೈಸ್ತವ ಸಂಗಸೀಯ॥**

**ಈ ಶಾರ್ವರಿ ಸಂವತ್ಸರದ (2020–2021) ಸೂರ್ಯಸಿದ್ಧಾಂತ ಪಂಚಾಂಗ ಮತ್ತು ಶ್ರೀವೈಷ್ಣವ ಆಚರಣೆ ಕೈಪಿಡಿಯನ್ನು** ಮುದ್ರಿಸಿ ಉಚಿತವಾಗಿ ವಿತರಿಸಲು ಉದಾರ ಮನಸ್ಸಿನಿಂದ ಧನಸಹಾಯ ಮಾಡಿದ ಸಂಸ್ಥೆ ಮತ್ತು ಮಹನೀಯರುಗಳ ಪಟ್ಟಿ; ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ವಂದನೆಗಳು.

| ಕ್ರ.ಸಂ. | ಧನಸಹಾಯ ಮಾಡಿದ ಸಂಸ್ಥೆ/ಮಹನೀಯರುಗಳು<br>ಶ್ರೀ/ಶ್ರೀಮತಿ. | ಮೊಬಲಗು<br>(ರೂ. ಗಳು) |
|---|---|---|
| 1. | ಶ್ರೀ ಶ್ರೀ ಶ್ರೀ ವರ್ತಮಾನ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳು ಆಶೀರ್ವಾದಗಳೊಂದಿಗೆ | |
| 2. | ಎಮ್.ಕೇ.ಶ್ರೀನಿವಾಸನ್ ಮತ್ತು ಶ್ರೀಮತಿ ದೇವಕಿ,ಬೆಂಗಳೂರು(ಮೇಷ್ಟ್ರಮ್ಮನ ಮನೆಯವರು) | 24,000–00 |
| 3. | ಮಾತ್ರೆ ರಂಗರಾಜನ್, ಬೆಂಗಳೂರು. | |
| 4. | ಮೆ. ಯತಿರಾಜ ರಾಮಾನುಜ ಟ್ರಸ್ಟ್, ಬೆಂಗಳೂರು | |
| 5. | ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆ, ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಮ್, ಮೈಸೂರು | |
| 6. | | |
| 7. | ರಾಧಾ ಶ್ರೀನಿವಾಸನ್, ಬೆಂಗಳೂರು | 2,000–00 |
| 8. | ಎಮ್.ಕೇ.ಶ್ರೀನಿವಾಸನ್(ಕೈಂಕರ್ಯಮ್), ಬೆಂಗಳೂರು | |
| 9. | ಕರಗಮ್ ಶೇಷ ಅಯ್ಯಂಗಾರ್ ಕುಟುಂಬದವರು, ಮೇಲುಕೋಟೆ | |
| 10. | ಎಮ್.ಪಿ.ಶ್ರೀರಾಮ್(ಬೆದ್ದ ಹಟ್ಟಿ ಮನೆಯವರು) ಬೆಂಗಳೂರು | |
| 11. | ಅನನ್ಯ ತಿರುಮಲ, ಮೈಸೂರು | |
| 12. | | |
| 13. | ಎಮ್.ವಿ.ಅಳಶಿಂಗರಾಚಾರ್, ಮೇಲುಕೋಟೆ | |
| 14. | ಕಸ್ತೂರಿ ಕಣ್ಣನ್,ಮೇಲುಕೋಟೆ | |
| 15. | ಹೆಚ್.ನಾರಾಯಣ ಜೋಯಿಸರು,ಮೇಲುಕೋಟೆ, | |
| 16. | ಜೀ.ಕೇ.ಪುಷ್ಪ, ಮೈಸೂರು | 1,000–00 |
| 17. | ಎಮ್.ಎ.ಶ್ರೀನಿವಾಸನ್, ಮೈಸೂರು | |
| 18. | ಟಿ.ಆರ್.ನಾರಾಯಣ್, ಬೆಂಗಳೂರು. | |
| 19. | ಜಗ್ಗು ಸುದರ್ಶನ ಪ್ರಸಾದ್, ಬೆಂಗಳೂರು | 150–00 |
| 20. | | |
| 21. | | |
| 22. | | |
| 23. | | |
| 24. | | |
| 25. | | |
| 26. | | |
| 27. | | |
| 28. | | |

**ಈ ಶಾರ್ವರಿ ಸಂವತ್ಸರದ (2020–2021) ವಾಕ್ಯ ಪಂಚಾಂಗ ಮತ್ತು ಶ್ರೀವೈಷ್ಣವ ಆಚರಣೆ ಕೈಪಿಡಿಯನ್ನು** ಮುದ್ರಿಸಿ ಉಚಿತವಾಗಿ ವಿತರಿಸಲು ಉದಾರವಾಗಿ ಸಹಾಯ ಮಾಡಿದ ಸಂಸ್ಥೆಗಳು ಮತ್ತು ಮಹನೀಯರುಗಳ ಪಟ್ಟಿ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ವಂದನೆಗಳು.

| ಕ್ರ.ಸಂ. | ಧನಸಹಾಯ ಮಾಡಿದ ಸಂಸ್ಥೆ/ಮಹನೀಯರುಗಳು ಶ್ರೀಮತಿ/ಶ್ರೀ | ಮೊಬಲಗು (ರೂ.ಗಳಲ್ಲಿ) |
|---|---|---|
| 1. | | |
| 2. | ಬೆಳಿಗಿರಿ ಮಂತ್ರಿ ಸಂಪತ್ಕುಮಾರಾಚಾರ್ ಟ್ರಸ್ಟ್, ಮೇಲುಕೋಟೆ | 5,000–00 |
| 3. | ಶಾರದ ರಘುನಾಥ್, ಬೆಂಗಳೂರು | 3,000–00 |
| 4. | ಕಾಶಿ ತಿರುವೇಂಕಟಾಚಾರ್ ಮಕ್ಕಳು,(ಕೃಷ್ಣಸ್ವಾಮಿ), ಮೇಲುಕೋಟೆ. | 3,000–00 |
| 5. | ಕೇ.ಎಸ್.ರಂಗನಾಥನ್,ಬೆಂಗಳೂರು, | |
| 6. | | |
| 7. | ಕೇ.ಎಲ್.ಚಕ್ರಪಾಣಿ ಆಚಾರ್ಯ, ಎಣ್ಣೂರು ರೋಡ್,ಕೇಶವನಗರ್, ಬೆಂಗಳೂರು | 1,000–00 |
| 8. | | |
| 9. | ಸುದರ್ಶನ, ಬಿ.ಟಿ.ಎಮ್.ಲೇ ಔಟ್.ಬೆಂಗಳೂರು | 500–00 |
| 10. | ಎ.ಆರ್.ಸಂಪತ್ಕುಮಾರನ್, ಬೆಂಗಳೂರು | |
| 11. | | |
| 12. | | |
| 13. | ಎಂಬಾರ್ ಶೇಷಾದ್ರಿ, ಬಸವನಗುಡಿ, ಬೆಂಗಳೂರು | 500–00 |
| 14. | | |
| 15. | | |
| 16. | | |
| 17. | | |
| 18. | | |
| 19. | | |
| 20. | | |
| 21. | | |
| 22. | | |

| ಸಂವತ್ಸರಗಳು–60 | | | | | | | |
|---|---|---|---|---|---|---|---|
| 1. | ಪ್ರಭವ | 16. | ಚಿತ್ರಭಾನು | 31. | ಹೇವಿಳಂಬೀ(ಹೇಮಲಂಬೀ) | 46. | ಪರೀಧಾವೀ |
| 2. | ವಿಭವ | 17. | ಸ್ವಭಾನು | 32. | ವಿಳಂಬೀ | 47. | ಪ್ರಮಾದೀಚ(ಪ್ರಮಾಥೀಚ) |
| 3. | ಶುಕ್ಲ | 18. | ತಾರಣ | 33. | ವಿಕಾರೀ | 48. | ಆನಂದ |
| 4. | ಪ್ರಮೋದ(ಪ್ರಮೋದೂತ) | 19. | ಪಾರ್ಥಿವ | 34. | ಶಾರ್ವರೀ | 49. | ರಾಕ್ಷಸ |
| 5. | ಪ್ರಜೋತ್ಪತ್ತಿ(ಪ್ರಜಾಪತಿ) | 20. | ವ್ಯಯ(ಅವ್ಯಯ) | 35. | ಪ್ಲವ | 50. | ನಳ |
| 6. | ಅಂಗೀರಸ | 21. | ಸರ್ವಜಿತ್ | 36. | ಶುಭಕೃತ್ | 51. | ಪೈಂಗಳ(ಪಿಂಗಳ) |
| 7. | ಶ್ರೀಮುಖ | 22. | ಸರ್ವಧಾರೀ | 37. | ಶೋಭಕೃತ್ | 52. | ಕಾಳಯುಕ್ತಿ |
| 8. | ಭಾವ | 23. | ವಿರೋಧೀ | 38. | ಕ್ರೋಧೀ | 53. | ಸಿದ್ಧಾರ್ಥೀ |
| 9. | ಯುವ | 24. | ವಿಕೃತಿ | 39. | ವಿಶ್ವಾವಸು | 54. | ರೌದ್ರಿ |
| 10. | ಧಾತೃ | 25. | ಖರ | 40. | ಪರಾಭವ | 55. | ದುರ್ಮತೀ |
| 11. | ಈಶ್ವರ | 26. | ನಂದನ | 41. | ಪ್ಲವಂಗ | 56. | ದುಂದುಭೀ |
| 12. | ಬಹುಧಾನ್ಯ | 27. | ವಿಜಯ | 42. | ಕೀಲಕ | 57. | ರುಧಿರೋದ್ಗಾರೀ |
| 13. | ಪ್ರಮಾಥೀ | 28. | ಜಯ | 43. | ಸೌಮ್ಯ | 58. | ರಕ್ತಾಕ್ಷೀ |
| 14. | ವಿಕ್ರಮ | 29. | ಮನ್ಮಥ | 44. | ಸಾಧಾರಣ | 59. | ಕ್ರೋಧನ |
| 15. | ವೃಷ(ವಿಷು) | 30. | ದುರ್ಮುಖಿ | 45. | ವಿರೋಧಿಕೃತ್ | 60. | ಅಕ್ಷಯ |

| ಅಯನಗಳು–2 | | |
|---|---|---|
| 1. | ಉತ್ತರಾಯಣ: | ಮಕರಮಾಸ ಆರಂಭದಿಂದ ಮಿಥುನಮಾಸದ ಅಂತ್ಯದವರೆಗೆ (ಜನವರಿ ಮಧ್ಯದಿಂದ ಜುಲೈ ಮಧ್ಯದವರೆಗೆ) |
| 2. | ದಕ್ಷಿಣಾಯನ: | ಕಟಕಮಾಸ ಆರಂಭದಿಂದ ಧನುರ್ಮಾಸದ ಅಂತ್ಯದವರೆಗೆ (ಜುಲೈ ಮಧ್ಯದಿಂದ ಜನವರಿ ಮಧ್ಯದವರೆಗೆ) |

| ಚಾಂದ್ರಮಾನ ಮಾಸಗಳು | ಋತುಗಳು–6 | ಸೌರಮಾನ ಮಾಸಗಳು |
|---|---|---|
| ಚೈತ್ರ– ವೈಶಾಖ | ವಸಂತ ಋತು | ಮೇಷ(ಚಿತ್ತಿರೈ) – ವೃಷಭ (ವೈಗಾಶಿ) |
| ಜ್ಯೇಷ್ಠ– ಆಷಾಢ | ಗ್ರೀಷ್ಮ ಋತು | ಮಿಥುನ(ಆನಿ) – ಕಟಕ (ಆಡಿ) |
| ಶ್ರಾವಣ– ಭಾದ್ರಪದ | ವರ್ಷ ಋತು | ಸಿಂಹ(ಆವಣಿ) – ಕನ್ಯಾ(ಪುರಟ್ಟಾಶಿ) |
| ಆಶ್ವಯುಜ– ಕಾರ್ತಿಕ | ಶರದ್ ಋತು | ತುಲಾ(ಐಪ್ಪಶಿ) – ವೃಶ್ಚಿಕ (ಕಾರ್ತಿಗೈ) |
| ಮಾರ್ಗಶಿರ–ಪುಷ್ಯ | ಹೇಮಂತ ಋತು | ಧನುಃ(ಮಾರ್ಹಳಿ)–ಮಕರ (ತೈ) |
| ಮಾಘ– ಫಾಲ್ಗುನ | ಶಿಶಿರ ಋತು | ಕುಂಭ(ಮಾಶಿ) – ಮೀನ (ಪಂಗುನಿ) |

| ತಿಥಿಗಳು | | ನಕ್ಷತ್ರಗಳು – 27 | | ಯೋಗಗಳು–27 | |
|---|---|---|---|---|---|
| ಶುಕ್ಲ(ಶುದ್ಧ)ಪಕ್ಷ | ಕೃಷ್ಣ(ಬಹುಳ)ಪಕ್ಷ | | | | |
| 1. ಪ್ರಥಮಾ | 1. ಪ್ರಥಮಾ | 1. ಅಶ್ವಿನೀ | 14 .ಚಿತ್ರಾ | 1. ವಿಷ್ಕಂಬ | 14. ಹರ್ಷಣ |
| 2. ದ್ವಿತೀಯಾ | 2. ದ್ವಿತೀಯಾ | 2. ಭರಣೀ | 15. ಸ್ವಾತೀ | 2. ಪ್ರೀತಿ | 15. ವಜ್ರ |
| 3. ತೃತೀಯಾ | 3. ತೃತೀಯಾ | 3. ಕೃತ್ತಿಕಾ | 16. ವಿಶಾಖಾ | 3. ಆಯುಷ್ಮಾನ್ | 16. ಸಿದ್ಧಿ |
| 4. ಚತುರ್ಥೀ | 4. ಚತುರ್ಥೀ | 4. ರೋಹಿಣೀ | 17. ಅನೂರಾಧಾ | 4. ಸೌಭಾಗ್ಯ | 17. ವ್ಯತೀಪಾತ |
| 5. ಪಂಚಮೀ | 5. ಪಂಚಮೀ | 5. ಮೃಗಶೀರ್ಷಾ | 18. ಜ್ಯೇಷ್ಠಾ | 5. ಶೋಭನ | 18. ವರಿಯಾನ್ |
| 6. ಷಷ್ಠೀ | 6. ಷಷ್ಠೀ | 6. ಆರ್ದ್ರಾ | 19. ಮೂಲ | 6. ಅತಿಗಂಡ | 19. ಪರಿಘ |
| 7. ಸಪ್ತಮೀ | 7. ಸಪ್ತಮೀ | 7. ಪುನರ್ವಸು | 20. ಪೂರ್ವಾಷಾಢಾ | 7. ಸುಕರ್ಮ | 20. ಶಿವ |
| 8. ಅಷ್ಟಮೀ | 8. ಅಷ್ಟಮೀ | 8. ಪುಷ್ಯ | 21. ಉತ್ತರಾಷಾಢಾ | 8. ಧೃತಿ | 21. ಸಿದ್ಧ |
| 9. ನವಮೀ | 9. ನವಮೀ | 9. ಆಶ್ಲೇಷಾ | 22. ಶ್ರವಣ | 9. ಶೂಲ | 22. ಸಾಧ್ಯ |
| 10. ದಶಮೀ | 10. ದಶಮೀ | 10.ಮಘಾ | 23. ಧನಿಷ್ಠಾ | 10. ಗಂಡ | 23. ಶುಭ |
| 11. ಏಕಾದಶೀ | 11. ಏಕಾದಶೀ | 11.ಪೂರ್ವಫಲ್ಗುನೀ(ಪುಬ್ಬ) | 24. ಶತಭಿಷಾ | 11. ವೃದ್ಧಿ | 24. ಶುಕ್ಲ |
| 12. ದ್ವಾದಶೀ | 12. ದ್ವಾದಶೀ | 12.ಉತ್ತರಫಲ್ಗುನೀ(ಉತ್ತರಾ) | 25. ಪೂರ್ವಭಾದ್ರಪದ | 12. ಧ್ರುವ | 25. ಬ್ರಹ್ಮ |
| 13. ತ್ರಯೋದಶೀ | 13. ತ್ರಯೋದಶೀ | 13.ಹಸ್ತ | 26. ಉತ್ತರಭಾದ್ರಪದ | 13. ವ್ಯಾಘಾತ | 26. ಐಂದ್ರ |
| 14. ಚತುರ್ದಶೀ | 14. ಚತುರ್ದಶೀ | | 27. ರೇವತೀ | | 27. ವೈಧೃತಿ |
| 15. ಪೂರ್ಣಿಮಾ | 15. ಅಮಾವಾಸ್ಯಾ | | | | |

| ಕರಣಗಳು–11 | | | ಸಂಕಲ್ಪ ಹೇಳುವಾಗ ಉಪಯೋಗಿಸುವ ವಾರಗಳ ಹೆಸರುಗಳು | |
|---|---|---|---|---|
| ಚರ ಕರಣಗಳು | | ಸ್ಥಿರ ಕರಣಗಳು | 1.ಭಾನು– ಭಾನುವಾಸರ | 5.ಗುರು–ಗುರುವಾಸರ |
| 1.ಬವ | 5.ಗರ | 8.ಶಕುನಿ | 2.ಸೋಮ– ಇಂದುವಾಸರ | 6.ಶುಕ್ರ–ಭಾರ್ಗವವಾಸರ |
| 2.ಬಾಲವ | 6.ವಣಿಕ್ | 9.ಚತುಷ್ಪಾತ್ | 3.ಮಂಗಳ–ಭೌಮವಾಸರ | 7.ಶನಿ–ಮಂದವಾಸರ (ಸ್ಥಿರವಾಸರ) |
| 3.ಕೌಲವ | 7.ಭದ್ರಾ | 10.ನಾಗವಾನ್ | 4.ಬುಧ–ಸೌಮ್ಯವಾಸರ | |
| 4.ತೈತಿಲ | | 11.ಕಿಂಸ್ತುಘ್ನ | | |

| | | | |
|---|---|---|---|
| **ಮೀನ** ಪೂರ್ವಭಾದ್ರಪದ 4ನೇಪಾದ, ಉತ್ತರಭಾದ್ರಪದ, ರೇವತೀ | **ಮೇಷ** ಅಶ್ವಿನೀ, ಭರಣೀ, ಕೃತ್ತಿಕಾ 1ನೇ ಪಾದ | **ವೃಷಭ** ಕೃತ್ತಿಕಾ 2,3,4 ಪಾದಗಳು, ರೋಹಿಣೀ, ಮೃಗಶೀರ್ಷಾ1,2 ಪಾದಗಳು | **ಮಿಥುನ** ಮೃಗಶೀರ್ಷಾ3,4 ಪಾದಗಳು, ಆರ್ದ್ರಾ, ಪುನರ್ವಸು1,2,3 ಪಾದಗಳು |
| **ಕುಂಭ** ಧನಿಷ್ಠಾ 3,4 ಪಾದಗಳು,ಶತಭಿಷಾ,ಪೂರ್ವಭಾದ್ರಪದ1,2,3,ಪಾದಗಳು | **ಮಾದರಿ ರಾಶಿ ಕುಂಡಲಿ ರಾಶಿಗಳು ಮತ್ತು ಅವುಗಳಲ್ಲಿರುವ ನಕ್ಷತ್ರಗಳು** | | **ಕಟಕ** ಪುನರ್ವಸು 4ನೇಪಾದ, ಪುಷ್ಯ, ಆಶ್ಲೇಷಾ |
| **ಮಕರ** ಉತ್ತರಾಷಾಢಾ 2,3,4 ಪಾದಗಳು, ಶ್ರವಣ, ಧನಿಷ್ಠಾ 1,2 ಪಾದಗಳು | | | **ಸಿಂಹ** ಮಘಾ, ಪೂರ್ವ ಫಲ್ಗುನೀ(ಪುಬ್ಬ), ಉತ್ತರ ಫಲ್ಗುನೀ(ಉತ್ತರಾ)1ನೇಪಾದ |
| **ಧನುಃ** ಮೂಲ, ಪೂರ್ವಾಷಾಢಾ, ಉತ್ತರಾಷಾಢಾ 1ನೇಪಾದ | **ವೃಶ್ಚಿಕ** ವಿಶಾಖಾ 4ನೇಪಾದ, ಅನೂರಾಧಾ, ಜ್ಯೇಷ್ಠಾ | **ತುಲಾ** ಚಿತ್ರಾ 3,4 ಪಾದಗಳು ಸ್ವಾತೀ, ವಿಶಾಖಾ 1,2,3ಪಾದಗಳು | **ಕನ್ಯಾ** ಉತ್ತರಫಲ್ಗುನೀ (ಉತ್ತರಾ)2,3,4 ಪಾದಗಳು ಹಸ್ತ, ಚಿತ್ರಾ 1,2 ಪಾದಗಳು |

**ಸರ್ವೇ ಜನಾ: ಸುಖಿನೋ ಭವಂತು; ಲೋಕಾಃ ಸಮಸ್ತಾಃ ಸುಖಿನೋ ಭವಂತು; ಸಮಸ್ತಸನ್ಮಂಗಳಾನಿ ಭವಂತು ॥**
**ಸರ್ವೇ ಚ ಸುಖಿನಸ್ಸಂತು ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ದುಃಖಭಾಗ್ಭವೇತ್ ॥**

**“ಎಯ್‌ದುಮವರ್‌ಕ್ಕು ಇನ್ನಿಲತ್ತಿಲ್ ಅರ್ಚಾವತಾರಮ್ ಎಳಿದು” ಎಂಬ ಜೀಯರ್ ವಚನದ 108 ಶ್ರೀವೈಷ್ಣವ ದಿವ್ಯದೇಶಗಳು:**

| | | |
|---|---|---|
| 1. ಶ್ರೀರಂಗಮ್ | 37. ತಿರುಮಣಿಕ್ಕೂಡಮ್ | 73. ತಿರುಕ್ಕೋವಲೂರ್ |
| 2. ಉರೈಯೂರ್ | 38. ಕಾವಳಂಬಾಡಿ | 74. ತಿರುಕ್ಕಚ್ಚಿ–ಅತ್ತಿಗಿರಿ |
| 3. ತಂಜೈಮಾಮಣಿಕ್ಕೋಯಿಲ್ | 39. ತಿರುವೆಳ್ಳಕ್ಕುಳಮ್ | 75. ಅಟ್ಟಬುಯಕರಮ್ |
| 4. ಅನ್‌ಬಿಲ್ | 40. ಪಾರ್‌ತ್ತನ್‌ಪಳ್ಳಿ | 76. ತಿರುತ್ತಣ್‌ಕಾ |
| 5. ಕರಂಬನೂರ್ | 41. ತಿರುಮಾಲಿರುಂಜೋಲೈ | 77. ವೇಳುಕ್ಕೈ |
| 6. ತಿರುವೆಳ್ಳರೈ | 42. ತಿರುಕ್ಕೋಟ್ಟಿಯೂರ್ | 78. ಪಾಡಗಮ್ |
| 7. ಪುಳ್ಳಂಬೂದಂಗುಡಿ | 43. ತಿರುಮೆಯ್ಯಮ್ | 79. ನೀರಗಮ್ |
| 8. ತಿರುಪ್ಪೇರ್‌ನಗರ್ | 44. ತಿರುಪ್ಪುಲ್ಲಾಣಿ | 80. ನಿಲಾತ್ತಿಂಗಳ್‌ತುಂಡಮ್ |
| 9. ಆದನೂರ್ | 45. ತಿರುತ್ತಣ್‌ಕಾಲ್ | 81. ಊರಗಮ್ |
| 10. ತಿರುವಳುಂದೂರ್ | 46. ತಿರುಮೋಗೂರ್ | 82. ತಿರುವೆಹ್‌ಕಾ |
| 11. ಶಿರುಪುಲಿಯೂರ್ | 47. ತಿರುಕ್ಕೂಡಲ್ | 83. ಕಾರಗಮ್ |
| 12. ತಿರುಚ್ಚೇರೈ | 48. ಶ್ರೀ ವಿಲ್ಲಿಪುತ್ತೂರ್ | 84. ಕಾರ್‌ವಾನಮ್ |
| 13. ತಲೈಚ್ಚಂಗನಾಣ್‌ಮದಿಯಮ್ | 49. ತಿರುಕ್ಕುರುಹೂರ್ | 85. ಕಳ್‌ವನೂರ್ |
| 14. ತಿರುಕ್ಕುಡಂದೈ | 50. ತೊಲೈವಿಲ್ಲಿಮಂಗಲಮ್ | 86. ಪವಳವಣ್ಣಮ್ |
| 15. ತಿರುಕ್ಕಂಡಿಯೂರ್ | 51. ಶಿರೀವರಮಂಗೈ | 87. ಪರಮೇಚ್ಚುರವಿಣ್ಣಗರಮ್ |
| 16. ತಿರುವಿಣ್ಣಗರ್ | 52. ತೆನ್‌ತಿರುಪ್ಪೇರ್ | 88. ತಿರುಪ್ಪುಟ್‌ಕುಳಿ |
| 17. ತಿರುಕ್ಕಣ್ಣಪುರಮ್ | 53. ಶ್ರೀ ವೈಗುಂಡಮ್ | 89. ತಿರುನಿನ್ರವೂರ್ |
| 18. ತಿರುವಾಲಿ ತಿರುನಗರಿ | 54. ತಿರುಪ್ಪುಳಿಂಗುಡಿ | 90 ತಿರುವೆವ್ವುಳ್ |
| 19. ತಿರುನಾಗೈ | 55. ವರಗುಣಮಂಗೈ | 91. ತಿರುನೀರ್‌ಮಲೈ |
| 20. ತಿರುನರೈಯೂರ್ | 56. ತಿರುಕ್ಕುಳಂದೈ | 92. ತಿರುವಿಡವೆಂದೈ |
| 21. ನಂದಿಪುರವಿಣ್ಣಗರಮ್ | 57. ತಿರುಕ್ಕುರುಂಗುಡಿ | 93. ತಿರುಕ್ಕಡನ್‌ಮಲ್ಲೈ |
| 22. ತಿರುಇಂದಳೂರ್ | 58. ತಿರುಕ್ಕೋಳೂರ್ | 94. ತಿರುವಲ್ಲಿಕ್ಕೇಣಿ |
| 23. ತಿಲ್ಲೈತ್ತಿರುಚ್ಚಿತ್ತಿರಕೂಡಮ್ | 59. ತಿರುವನಂತಪುರಮ್ | 95. ತಿರುಕ್ಕಡಿಗೈ |
| 24. ಕಾಳಿಚ್ಚೀರಾಮವಿಣ್ಣಗರಮ್ | 60. ತಿರುವಣ್‌ಪರಿಶಾರಮ್ | 96. ತಿರುವೇಂಗಡಮ್ |
| 25. ಕೂಡಲೂರ್ | 61. ತಿರುಕ್ಕಾಟ್‌ಕರೈ | 97. ಶಿಂಗವೇಳ್‌ಕುನ್ರಮ್ |
| 26. ತಿರುಕ್ಕಣ್ಣಂಗುಡಿ | 62. ತಿರುಮೂಳಿಕ್ಕಳಮ್ | 98. ಅಯೋತ್ತಿ |
| 27. ತಿರುಕ್ಕಣ್ಣಮಂಗೈ | 63. ತಿರುಪ್ಪುಲಿಯೂರ್ | 99. ನೈಮಿಶಾರಣಿಯಮ್ |
| 28. ಕಪಿಸ್ಥಲಮ್ | 64. ತಿರುಚ್ಚೆಂಗುನ್ರೂರ್ | 100.ಶಾಲಕ್ಕಿರಾಮಮ್ |
| 29. ತಿರುವೆಳ್ಳಿಯಂಗುಡಿ | 65. ತಿರುನಾವಾಯ್ | 101.ವದರಿಯಾಚ್ಚಿರಮಮ್ |
| 30. ಮಣಿಮಾಡಕ್ಕೋಯಿಲ್ | 66. ತಿರುವಲ್ಲವಾಳ್ | 102.ಕಂಡಮೆನ್ನುಮ್‌ಕಡಿನಗರ್ |
| 31. ವೈಗುಂದವಿಣ್ಣಗರಮ್ | 67. ತಿರುವಣ್‌ವಂಡೂರ್ | 103.ಪಿರುದಿ |
| 32. ಅರಿಮೇಯವಿಣ್ಣಗರಮ್ | 68. ತಿರುವಾಟ್ಟಾರು | 104.ವಡಮದುರೈ |
| 33. ತಿರುತ್ತೇವನಾರ್‌ತೊಗೈ | 69. ತಿರುವಿತ್ತುವಕ್ಕೋಡು | 105.ದುವಾರಕೈ |
| 34. ವಣ್‌ಪುರುಡೋತ್ತಮಮ್ | 70. ತಿರುಕ್ಕಡಿತ್ತಾನಮ್ | 106.ತಿರುವಾಯ್‌ಪ್ಪಾಡಿ |
| 35. ಶೆಂಪೊನ್‌ಶೆಯ್‌ಕೋಯಿಲ್ | 71. ತಿರುವಾರನ್‌ವಿಳೈ | |
| 36. ತಿರುತ್ತೆತ್ತಿಯಂಬಲಮ್ | 72. ತಿರುವಯಿಂದಿರಪುರಮ್ | |

107. ತಿರುನಾರಾಯಣಪುರಮ್(ಮೇಲುಕೋಟೆ)—ಉಡೈಯವರ್ ತಿರುನಾರಾಯಣನಿಗೆ ಒರುನಾಯಕಮ್ ತಿರುವಾಯ್‌ಮೊಳಿ(4–1)ಯನ್ನು ಸಮರ್ಪಿಸಿರುವರು.

108. ರಾಜಮನ್ನಾರ್‌ಗುಡಿ—ಮಣವಾಳ ಮಾಮುನಿಗಳು ರಾಜಗೋಪಾಲನಿಗೆ ತೀರ್‌ಪ್ಪಾರೈಯಾಮಿನಿ ತಿರುವಾಯ್‌ಮೊಳಿ(4–6)ಯಲ್ಲಿ ಉನ್ನಿತ್ತುಮತ್ತೊರುದೈವಮ್(10ನೇ) ಪಾಶುರವನ್ನು ಸಮರ್ಪಿಸಿರುವರು. ವೇದಾಂತದೇಶಿಕನ್ ರಾಜಗೋಪಲನಿಗೆ ತಮ್ಮ ಗೋಪಾಲವಿಂಶತಿಯಲ್ಲಿ ವ್ರಜಯೋಷಿದಪಾಂಗವೇಧನೀಯಂ(6ನೇ) ಶ್ಲೋಕವನ್ನು ಸಮರ್ಪಿಸಿರುವರು.

**ಭೂಲೋಕದಲ್ಲಿ ಇಲ್ಲದ ಮತ್ತು ನಮ್ಮ ಸಾಮಾನ್ಯ ಕಣ್ಣುಗಳಿಗೆ ಕಾಣದ ಶ್ರೀವೈಷ್ಣವ ದಿವ್ಯದೇಶಗಳು:**

1. ತಿರುಪ್ಪಾರ್‌ಕಡಲ್(ಕ್ಷೀರಾಬ್ಧಿ) 2. ತಿರುನಾಡು(ಪರಮಪದ)

**ಶ್ರೀ ರಾಮಾನುಜಾಚಾರ್ಯರು ಏರ್ಪಡಿಸಿದ 74 ಸಿಂಹಾಸನಾಧಿಪತಿಗಳ ವಿವರ**

| | | |
|---|---|---|
| 1. | ಆಳವಂದಾರ್ ಕುಮಾರರ್ ಶೊಟ್ಟೈನಂಬಿ<br>ಅವರ್ ಕುಮಾರರ್ ಎನ್ನಾಚ್ಚಾನ್<br>ಅವರ್ ಕುಮಾರರ್ ಪಿಳ್ಳೈಯಪ್ಪನ್ | |
| 2. | ಪೆರಿಯನಂಬಿ ಕುಮಾರರ್ ಪುಂಡರೀಕರ್. | |
| 3. | ತಿರುಕ್ಕೋಟ್ಟಿಯೂರ್‌ನಂಬಿ ಕುಮಾರರ್<br>ತೆರ್‌ಕ್ಕಾಳ್ವಾನ್. | |
| 4. | ತಿರುಮಾಲೈಯಾಂಡಾನ್ ಕುಮಾರರ್<br>ಸುಂದರತ್ತೊಳುಡೈಯಾನ್. | |
| 5. | ಪೆರಿಯತಿರುಮಲೈನಂಬಿ ಕುಮಾರರ್ ರಾಮಾನುಜನ್<br>ಪಿಳ್ಳೈತಿರುಮಲೈನಂಬಿ. | |
| 6. | ಕೂರತ್ತಾಳ್ವಾನ್ ಕುಮಾರರ್ ಭಟ್ಟರ್,<br>ಶ್ರೀರಾಮಪಿಳ್ಳೈ. | |
| 7. | ಮುದಲಿಯಾಂಡನ್ ಕುಮಾರರ್<br>ಕಂದಾಡೈಯಾಂಡಾನ್. | |
| 8. | ನಡುವಿಲಾಳ್ವಾನ್. | |
| 9. | ಗೋಮಠತ್ತಾಳ್ವಾನ್. | |
| 10. | ತಿರುಕ್ಕೋವಲೂರಾಳ್ವಾನ್. | |
| 11. | ತಿರುಮೋಗೂರಾಳ್ವಾನ್. | |
| 12. | ಪಿಳ್ಳೈಪಿಳ್ಳೈಯಾಳ್ವಾನ್. | |
| 13. | ನಡಾದೂರಾಳ್ವಾನ್. | |
| 14. | ಎಂಗಳಾಳ್ವಾನ್. | |
| 15. | ಅನಂದಾಳ್ವಾನ್. | |
| 16. | ಮಿಳಗಾಳ್ವಾನ್. | |
| 17. | ನೆಯ್ಯುಂಡಾಳ್ವಾನ್. | |
| 18. | ಶೇಟ್ಟಲೂರ್ ಶಿರಿಯಾಳ್ವಾನ್. | |
| 19. | ವೇದಾಂತಿಯಾಳ್ವಾನ್. | |
| 20. | ಕೋಯಿಲಾಳ್ವಾನ್. | |
| 21. | ಉಕ್ಕಲಾಳ್ವಾನ್. | |
| 22. | ಅರಣಪುರತ್ತಾಳ್ವಾನ್. | |
| 23. | ಎಂಬಾರ್. | |
| 24. | ಕಿಡಾಂಬಿಯಾಚ್ಚಾನ್. | |
| 25. | ಕಣಿಯನೂರ್ ಶಿರಿಯಾಚ್ಚಾನ್. | |
| 26. | ಈಚ್ಚಂಪಾಡಿಯಾಚ್ಚಾನ್. | |
| 27. | ಕೊಂಗಿಲಾಚ್ಚಾನ್. | |
| 28. | ತಿರುಮಲೈ ನಲ್ಲಾನ್. | |
| 29. | ತಿರುನಗರಿಪ್ಪಿಳ್ಳಾನ್. | |
| 30. | ಕಾರಾಂಜಿಸೋಮಯಾಜಿಯಾರ್. | |
| 31. | ಅಲಂಕಾರವೇಂಗಡವರ್. | |
| 32. | ನಂಬಿಕರುಂದೇವರ್. | |
| 33. | ಶಿರುಪ್ಪುಳ್ಳಿದೇವರಾಜಭಟ್ಟರ್. | |
| 34. | ಪಿಳ್ಳೈಯುರಂದೈಯುಡೈಯಾರ್. | |
| 35. | ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್. | |
| 36. | ಪೆರಿಯಕೋಯಿಲ್ ವಳ್ಳಲಾರ್. | |
| 37. | ತಿರುಕ್ಕಣ್ಣಪುರತ್ತರೈಯರ್/ ತಿರುಕ್ಕಣ್ಣಪುರತ್ತೆಚ್ಚಾನ್ | |
| | | |

| | | |
|---|---|---|
| 38. | ಆಸೂರಿಪ್ಪೆರುಮಾಳ್. | |
| 39. | ಮುನಿಪ್ಪೆರುಮಾಳ್. | |
| 40. | ಅಮ್ಮಂಗಿಪ್ಪೆರುಮಾಳ್. | |
| 41. | ಮಾರುತಿಪ್ಪೆರಿಯಾಂಡಾನ್. | |
| 42. | ಮಾರೊನ್ನಿಲ್ಲಾಮಾರುತಿಚ್ಚಿರಿಯಾಂಡಾನ್. | |
| 43. | ಸೋಮಾಶಿಯಾಂಡಾನ್. | |
| 44. | ಜೀಯರಾಂಡಾನ್. | |
| 45. | ಈಶ್ವರಾಂಡಾನ್. | |
| 46. | ಈಯುಣ್ಣಿಪ್ಪಿಳ್ಳೈಯಾಂಡಾನ್. | |
| 47. | ಪೆರಿಯಾಂಡಾನ್. | |
| 48. | ಶಿರಿಯಾಂಡಾನ್. | |
| 49. | ಕುರಿಂಜಿಯೂರ್ ಶಿರಿಯಾಂಡಾನ್. | |
| 50. | ಅಮ್ಮಂಗಿಯಾಂಡಾನ್. | |
| 51. | ಆಳವಂದಾರಾಂಡಾನ್. | |
| 52. | ಅರುಳಾಳಪ್ಪೆರುಮಾಳ್ ಎಂಬೆರುಮಾನಾರ್. | |
| 53. | ತೊಂಡನೂರ್ ನಂಬಿ. | |
| 54. | ಮರುದೂರ್ ನಂಬಿ. | |
| 55. | ಮಳುವೂರ್ ನಂಬಿ. | |
| 56. | ತಿರುಕ್ಕುರುಂಗುಡಿ ನಂಬಿ. | |
| 57. | ಕುರವೈನಂಬಿ. | |
| 58. | ಮುಡುಂಬೈನಂಬಿ. | |
| 59. | ವಡುಹನಂಬಿ. | |
| 60. | ವಂಗಿಪುರತ್ತು ನಂಬಿ ಮತ್ತು ವಂಗಿಪುರತ್ತಾಚ್ಚಿ | |
| 61. | ಶ್ರೀಪರಾಂಕುಶನಂಬಿ. | |
| 62. | ಅಮ್ಮಂಗಿಯಮ್ಮಾಳ್. | |
| 63. | ಪರುತ್ತಿಕ್ಕೊಲ್ಲೈಯಮ್ಮಾಳ್. | |
| 64. | ಉಕ್ಕಲಮ್ಮಾಳ್. | |
| 65. | ಶೊಟ್ಟೈಯಮ್ಮಾಳ್. | |
| 66. | ಮುಡುಂಬೈಯಮ್ಮಾಳ್. | |
| 67. | ಕೊಮಾಂಡೂರ್ ಪಿಳ್ಳೈ. | |
| 68. | ಕೊಮಾಂಡೂರ್ ಇಳೈಯವಲ್ಲಿ. | |
| 69. | ಕಿಡಾಂಬಿಪ್ಪೆರುಮಾಳ್. | |
| 70. | ಆರ್ಕ್ಕಾಟ್ಟುಪ್ಪಿಳ್ಳಾನ್. | |
| 71. | ಈಚ್ಚಂಪಾಡಿಜ್ಜಿಯರ್. | |
| 72. | ಶಟ್ಟಂಪಳ್ಳಿಜ್ಜೀಯರ್. | |
| 73. | ತಿರುವೆಳ್ಳರೈಜ್ಜೀಯರ್. | |
| 74. | ಆಳ್ಕೊಂಡವಿಲ್ಲಿಜ್ಜೀಯರ್. | |

ಗ್ರಂಥಗಳ ಆಧಾರ:
ಆರಾಯಿರಪ್ಪಡಿ ಗುರುಪರಂಪರಾ ಪ್ರಭಾವಮ್, ರಾಮಾನುಜಾರ್ಯ ದಿವ್ಯಚರಿತ್ತೈ, ಪೆರಿಯ ತಿರುಮುಡಿ ಅಡೈವು.